








YASKAWA

# Yaskawa Group ನೀತಿ ಸಂಹಿತೆ ಮೇಲಿನ ಮಾರ್ಗದರ್ಶನ

ಪ್ರಾಮಾಣಿಕತೆಯು ನಮ್ಮನ್ನು ಸಮರ್ಥನೀಯ ಯಶಸ್ಸಿನ
ಕಡೆಗೆ ಮುನ್ನಡೆಸುತ್ತದೆ

# I ಉನ್ನತ ಆಡಳಿತವರ್ಗಗಳಿಂದ ಸಂದೇಶ

## ಪ್ರೀತಿಯ ಸಹೋದ್ಯೋಗಿಗಳೆ,

"ಸಮಾಜದ ಆಧುನಿಕತೆ ಮತ್ತು ಮಾನವರ ಯೋಗಕ್ಷೇಮಕ್ಕಾಗಿ ಕೊಡುಗೆ ನೀಡಲು ನಮ್ಮ ವ್ಯವಹಾರ ಪ್ರಯತ್ನಗಳನ್ನು ಬಳಸಲು" ನಾವು ರೂಪಿಸಿರುವ ಕಾರ್ಪೋರೇಟ್ ಅಭಿಯಾನದೊಂದಿಗೆ, YASKAWA Electric Corporation 1915ರಲ್ಲಿ ಸ್ಥಾಪನೆ ಆದಾಗಿನಿಂದ ತನ್ನ ವ್ಯವಹಾರವನ್ನು ವಿಧೇಯತೆಯಿಂದ 100 ವರ್ಷಗಳಿಗೂ ಅಧಿಕ ಕಾಲ ನಿರ್ವಹಿಸಿದೆ ಎನ್ನುವುದು ನಮಗೆ ಹೆಮ್ಮೆಯಾಗುತ್ತದೆ.

1997ರಲ್ಲಿ, "YASKAWA Electric Corporation ನೀತಿ ಸಂಹಿತೆ" ಯನ್ನು ನಾವು ಜಾರಿಗೊಳಿಸಿದೆವು ಮತ್ತು, ಸಮಾಜದ ಒಬ್ಬರು ಸದಸ್ಯರಾಗಿ, ನಾವು ನಮ್ಮ ವ್ಯವಹಾರದ ಚಟುವಟಿಕೆಗಳನ್ನು ಪಾಲನೆ ಮತ್ತು ಪ್ರಾಮಾಣಿಕತೆಯ ಆಧಾರದ ಮೇಲೆ ನಡೆಸಲು ಬದ್ಧರಾಗಿದ್ದೇವೆ.

ಇಂದು, Yaskawa Groupನ ವ್ಯವಹಾರ ವ್ಯಾಪ್ತಿ ಮತ್ತು ದೇಶಗಳು/ಪ್ರದೇಶಗಳಕಾರ್ಯಾಚರಣೆಯು ವಿಸ್ತರಿಸುತ್ತಿವೆ, ಜೊತೆಗೆ ನಮ್ಮ ಸುತ್ತಲಿನ ಸಾಮಾಜಿಕ ಪರಿಸರಗಳು ಹೆಚ್ಚೆಚ್ಚು ಸಂಕೀರ್ಣವಾಗುತ್ತಿವೆ ಮತ್ತು ಚಲನಶೀಲತೆಯಿಂದ ಬದಲಾಗುತ್ತಿವೆ.

ಅಂತಹ ಬದಲಾಗುತ್ತಿರುವ ಪರಿಸರಗಳಿಗೆ ಸ್ಪಂದಿಸುತ್ತಾ, ನಾವು ನಮ್ಮ ವ್ಯವಹಾರ ಕಾರ್ಯಾಚರಣೆಗಳ ಮೇಲೆ ಹೆಚ್ಚಿನ ಒತ್ತು ನೀಡುವುದರೊಂದಿಗೆ ನೀತಿಸಂಹಿತೆಯನ್ನು ಪರಿಷ್ಕರಿಸಿದ್ದೇವೆ ಮತ್ತು ಬಿಡುಗಡೆ ಮಾಡಿದ್ದೇವೆ "Yaskawa Group ನೀತಿ ಸಂಹಿತೆ ಮೇಲಿನ ಮಾರ್ಗದರ್ಶನ"ವನ್ನು (ಇನ್ನುಮುಂದೆ "ಮಾರ್ಗದರ್ಶನ" ಎಂದು ಕರೆಯಲಾಗುತ್ತದೆ).

ಈ ಮಾರ್ಗದರ್ಶನದಲ್ಲಿ, Yaskawa Groupನ ಪ್ರತಿಯೊಬ್ಬ ಅಧಿಕಾರಿ/ಉದ್ಯೋಗಿಯು ಯಾವಾಗಲೂ ನಿಯಮಗಳನ್ನು ಅನುಸರಿಸಲು, ಕಾರ್ಯಾಚರಣೆಗಳನ್ನು ನ್ಯಾಯೋಚಿತವಾಗಿ ಮತ್ತು ವಿಧೇಯತೆಯಿಂದ ನಡೆಸಲು ಮತ್ತು ಪಾಲನೆ ಮತ್ತು ಪ್ರಾಮಾಣಿಕತೆ ನಡವಳಿಕೆಗಳನ್ನು ಅಭ್ಯಾಸದಲ್ಲಿ ತೊಡಗಿಸಲು ಮತ್ತು ನೆರವಾಗಲು ಅದರ ಮೂಲ ವಿಚಾರಗಳು ಮತ್ತು ನಿರ್ದಿಷ್ಟ ಮಾರ್ಗದರ್ಶನಗಳನ್ನು ರಚಿಸಿದ್ದೇವೆ. ಪಾಲನಾ ವಿಷಯಗಳಲ್ಲಿ ನಿಮಗೆ ಏನಾದರೂ ಸಂದೇಹಗಳು ಇದ್ದಲ್ಲಿ, ದಯವಿಟ್ಟು ಮಾರ್ಗದರ್ಶನವನ್ನು ಪುನ: ಓದಿ ಮತ್ತು YASKAWA Electric Corporation ಅಥವಾ ನಿಮ್ಮ ಕಂಪನಿಯ ಲೈನ್ ವ್ಯವಸ್ಥಾಪಕರು, ಸಹೋದ್ಯೋಗಿಗಳು ಅಥವಾ ಪಾಲನಾ ಅಧಿಕಾರಿಯ ಜೊತೆ ಸಮಾಲೋಚಿಸಿ.

Yaskawa Group ಬಲವಾಗಿ ಕೋರುತ್ತದೆ ಪ್ರತಿಯೊಬ್ಬ ಅಧಿಕಾರಿ ಮತ್ತು ಉದ್ಯೋಗಿಯು ಉನ್ನತ ನೈತಿಕ ಮಾನದಂಡಗಳನ್ನು ಹೊಂದಿರಬೇಕು ಮತ್ತು ನ್ಯಾಯೋಚಿತ ಮತ್ತು ವಿಧೇಯತೆಯ ರೀತಿಯಲ್ಲಿ ವರ್ತಿಸಬೇಕು ಎಂದು. ಕೇವಲ ಒಬ್ಬ ವ್ಯಕ್ತಿಯಿಂದ ಪಾಲನೆಯ ಒಂದೇ ಒಂದು ಉಲ್ಲಂಘನೆ ಆದರೂ ಅದು ಇಡೀ Yaskawa Groupನ ಗೌರವ ಮತ್ತು ವಿಶ್ವಾಸಾರ್ಹತೆಯನ್ನು ನಾಶಪಡಿಸಬಹುದು. ಹೀಗಾಗಿ, ಪಾಲನೆ ಮತ್ತು ಪ್ರಾಮಾಣಿಕತೆಯ ಹೊಂದಾಣಿಕೆಯ ಮೂಲಕ ಲಾಭಗಳನ್ನು ಗಳಿಸುವ ಪ್ರಯತ್ನವನ್ನು ಎಂದಿಗೂ ಸಮರ್ಥಿಸಿಕೊಳ್ಳಲು ಆಗುವುದಿಲ್ಲ. ದಯವಿಟ್ಟು ತೀವ್ರವಾಗಿ ಅರಿವು ಹೊಂದಿರಿ, ನಿಮ್ಮಲ್ಲಿ ಪ್ರತಿಯೊಬ್ಬರೂ ತೆಗೆದುಕೊಳ್ಳುವ ಕ್ರಮವು ಪ್ರಪಂಚಕ್ಕೇ ಸಾರುತ್ತದೆ ನಾವು ಯಾರೆಂದು, ಮತ್ತು ನೀವು ಪಾಲನೆ ಮತ್ತು ಲಾಭದ ಗೊಂದಲವನ್ನು ಎದುರಿಸಿದ ಸಂದರ್ಭದಲ್ಲಿ ಸರಿಯಾದ ಕೆಲಸವನ್ನು ಮಾಡಲು ಎಂದಿಗೂ ಹಿಂಜರಿಯದಿರಿ.

ಪಾಲನೆ ಮತ್ತು ಪ್ರಾಮಾಣಿಕತೆಯನ್ನು ಆಧಾರಿಸಿದ ನಿಮ್ಮ ನಡವಳಿಕೆಗಳು Yaskawa Groupನ ಹೆಚ್ಚಿನ ಬೆಳವಣಿಗೆಯ ಆಧಾರಸ್ತಂಭಗಳಾಗಿರುತ್ತವೆ. ಅವುಗಳು Yaskawa Groupನ ಮೌಲ್ಯಗಳಾದ ನಿರ್ವಹಣೆಯ ಸಮೂಹ ತತ್ವವನ್ನೂ ಸಹ ಪ್ರತಿನಿಧಿಸುತ್ತವೆ.

March 2016

**Representative Director,**
**President**

# ವಿಷಯ ಸೂಚಿ

**I. ಮೂಲ ನೀತಿಗಳು . . . . . 3**

1. Yaskawa Group ನಿರ್ವಹಣೆಯ ತತ್ವಗಳು . . . . . 3
2. ನಮ್ಮ ನೀತಿಗಳ ಕಾರ್ಯಚೌಕಟ್ಟು. . . . . 3
3. "ಪಾಲನೆ ಮತ್ತು ಪ್ರಾಮಾಣಿಕತೆ"ಎಂದರೇನು. . . . . 4
4. ಅಧಿಕಾರಿಗಳು ಮತ್ತು ವ್ಯವಸ್ಥಾಪಕರ ಜವಾಬ್ದಾರಿಗಳು . . . . . 4
5. ಉದ್ಯೋಗಿಗಳ ಜವಾಬ್ದಾರಿಗಳು. . . . . 4
6. ಶೂನ್ಯ-ಸಹಿಷ್ಣುತೆ ನೀತಿ . . . . . 4

**II. YASKAWA GROUP ನೀತಿ ಸಂಹಿತೆ . . . . . 5**

**III. ನಮ್ಮ ಬದ್ಧತೆಗಳು . . . . . 7**

1. ಪಾಲನೆ ಮತ್ತು ಪ್ರಾಮಾಣಿಕ, ಜವಾಬ್ದಾರಿಯುತ ನಡವಳಿಕೆ. . . . . 9
2. ಪರಿಸರ-ಸ್ನೇಹಿ ವ್ಯವಹಾರ ಚಟುವಟಿಕೆಗಳ ಮೂಲಕ ಸಮರ್ಥನೀಯ ಸಮಾಜ . . . . . 10
3. ನ್ಯಾಯೋಚಿತ ಸ್ಪರ್ಧೆ. . . . . 11
4. ಭೌದ್ಧಿಕ ಆಸ್ತಿ ಹಕ್ಕುಗಳು . . . . . 12
5. ಮಾಹಿತಿ ಭದ್ರತೆ . . . . . 13
6. ಸಕಾಲಿಕ ಮತ್ತು ಸೂಕ್ತ ಬಹಿರಂಗಪಡಿಸುವಿಕೆ. . . . . 14
7. ದಾಖಲೆ ನಿರ್ವಹಣೆ, ನ್ಯಾಯೋಚಿತ ಮತ್ತು ಪಾರದರ್ಶಕ ನಿರ್ಧಾರ-ಕೈಗೊಳ್ಳುವಿಕೆ . . . . . 15
8. ಲೆಕ್ಕಪತ್ರ ಮತ್ತು ತೆರಿಗೆ ನಿಯಮಗಳ ಪಾಲನೆ . . . . . 16
9. ಭದ್ರತಾ ವ್ಯಾಪಾರ ನಿಯಂತ್ರಣದ ಅತ್ಯುತ್ತಮ ನಿರ್ವಹಣೆ. . . . . 17
10. ಮಾರಾಟ ಮತ್ತು ಸಾಲ ನಿರ್ವಹಣೆ. . . . . 18
11. ಸುರಕ್ಷತೆ ಮತ್ತು ಗುಣಮಟ್ಟ ನಿಯಂತ್ರಣ . . . . . 19
12. ಖರೀದಿ ಮತ್ತು ಸೂಕ್ತ ಪಾವತಿ . . . . . 20
13. ಹಂಚಿಕೆದಾರರು, ಏಜೆಂಟರು ಮತ್ತು ಪ್ರತಿನಿಧಿಗಳೊಂದಿಗೆ ಬಾಂಧವ್ಯ. . . . . 21
14. ಶ್ರೇಯಾಸಕ್ತರು ಮತ್ತು ಆಸಕ್ತ ಪಕ್ಷಗಳೊಂದಿಗೆ ಬಾಂಧವ್ಯಗಳು . . . . . 22
15. ಕಾರ್ಮಿಕ ಕಾನೂನುಗಳ ಪಾಲನೆ . . . . . 23
16. ತೃಪ್ತಿಕರ ಕಾರ್ಯಸ್ಥಳ ಪರಿಸರ . . . . . 24

**IV. ಮಾತನಾಡಿ . . . . . 25**

1. ನೆರವು ಮತ್ತು ಸಲಹೆ ಪಡೆಯುವುದು . . . . . 25
2. Speak Up ಚಾನೆಲ್ಲುಗಳು. . . . . 25

**V. ಪ್ರಾಮಾಣಿಕತೆ ಪರೀಕ್ಷೆ. . . . . 26**

# I ಮೂಲ ನೀತಿಗಳು


## 1. Yaskawa Group ನಿರ್ವಹಣಾ ತತ್ವ

Yaskawaದಲ್ಲಿ ನಮ್ಮ ಅಭಿಯಾನವು ಸಮಾಜದ ಆಧುನಿಕತೆ ಮತ್ತು ಮಾನವಕುಲದ ಯೋಗಕ್ಷೇಮಕ್ಕಾಗಿ ಕೊಡುಗೆ ನೀಡಲು ನಮ್ಮ ವ್ಯವಹಾರ ಪ್ರಯತ್ನಗಳನ್ನು ಬಳಸುವುದು ಆಗಿದೆ.

ಈ ಮೂಲ ಸಿದ್ಧಾಂತಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ನಾವು ನಮ್ಮ ಅಭಿಯಾನವನ್ನು ಪೂರ್ಣಗೊಳಿಸುತ್ತೇವೆ:

1. ನಮ್ಮ ಗುಣಮಟ್ಟದ ಅಡಿಪಾಯದ ಮೇಲೆ ಒತ್ತು ನೀಡುವ ಜೊತೆಗೆ, ವಿಶ್ವ-ದರ್ಜೆಯ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು ಮತ್ತು ವರ್ಧಿಸುವುದು.
2. ನಿರ್ವಹಣೆ ಮತ್ತು ಕಾರ್ಯಾಚರಣಾ ದಕ್ಷತೆಯನ್ನು ವರ್ಧಿಸುವುದು ಮತ್ತು ಕಂಪನಿಯ ಯಶಸ್ವೀ ಬೆಳವಣಿಗೆಗೆ ಲಾಭಗಳಿಕೆಯನ್ನು ಸಾಧಿಸುವುದು.
3. ಮಾರುಕಟ್ಟೆಯ ಅವಶ್ಯಕತೆಗಳನ್ನು ತೃಪ್ತಿಪಡಿಸುವುದು ಮತ್ತು ಒಂದು ಗ್ರಾಹಕ-ಕೇಂದ್ರಿತ ಸಂಸ್ಥೆಯಾಗಿ ನಮ್ಮ ಗ್ರಾಹಕರಿಗೆ ಸೇವೆ ಸಲ್ಲಿಸಲು ನಮ್ಮನ್ನು ನಾವು ಅರ್ಪಣೆ ಮಾಡಿಕೊಳ್ಳುವುದು.

## 2. ನಮ್ಮ ನೀತಿಗಳ ಕಾರ್ಯಚೌಕಟ್ಟು




ನಾವು ಒಂದೇ Yaskawa Group[*1] "Yaskawa Group ನಿರ್ವಹಣಾ ತತ್ವ" ದ ಸಾಮಾನ್ಯ ಅಭಿಯಾನದಿಂದ ವಿಶ್ವಾದ್ಯಂತ ಒಂದುಗೂಡಿದ್ದೇವೆ. Yaskawa Groupನ ಯಶಸ್ವೀ ಮತ್ತು ಸಮರ್ಥನೀಯ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಅಭಿಯಾನವನ್ನು ಪೂರೈಸಲು, ಪ್ರತಿಯೊಂದೂ Yaskawa Groupನ ಕಂಪನಿಯು "Yaskawa Group ನೀತಿ ಸಂಹಿತೆಯ ಮೂಲಭೂತಗಳು"[*2] ಹಾಗೂ ಕಾನೂನುಗಳು ಮತ್ತು ನಿಯಂತ್ರಣಗಳು ಮತ್ತು ವ್ಯವಹಾರ ನೀತಿಯನ್ನು ಅನುಸರಿಸಲು ಬದ್ಧವಾಗಿರುವುದು ಅಗತ್ಯ.. ಹಾಗೂ, ಗ್ರೂಪ್ ನ ಪ್ರತಿಯೊಬ್ಬ ಅಧಿಕಾರಿಯು ಮತ್ತು ಉದ್ಯೋಗಿಯು "Yaskawa Group ನೀತಿ ಸಂಹಿತೆ" ಗೆ ಅನುಗುಣವಾಗಿ ನಡೆದುಕೊಳ್ಳಲು "ನಮ್ಮ ಬದ್ಧತೆಗಳು"[*3] ಅನ್ನು ಅನುಸರಿಸಬೇಕು.

*1 ಈ ಮಾರ್ಗದರ್ಶನದಲ್ಲಿ, ಸಾಮೂಹಿಕವಾಗಿ YASKAWA Electric Corporation ಮತ್ತು ಅದರ ದೇಶೀಯ ಮತ್ತು ವಿದೇಶೀ ಅಂಗಸಂಸ್ಥೆಗಳನ್ನು, ಇವುಗಳನ್ನು ಇನ್ನುಮುಂದೆ "Yaskawa Group" ಅಥವಾ ಸರಳವಾಗಿ "ಗ್ರೂಪ್" ಎಂದು ಉಲ್ಲೇಖಿಸಲಾಗುತ್ತದೆ.

*2 ಆದ್ದರಿಂದ, ಗ್ರೂಪ್ ಕಂಪನಿಗಳು "Yaskawa Group ನೀತಿ ಸಂಹಿತೆ" ಅಥವಾ "ನಮ್ಮ ಬದ್ಧತೆಗಳು" ಇವುಗಳಲ್ಲಿ ಯಾವುದೇ ನಿಬಂಧನೆಗಳನ್ನು ಬದಲಾವಣೆ ಮಾಡಲು YASKAWA Electric Corporation ಪೂರ್ವ ಅನುಮತಿಯನ್ನು ಪಡೆಯತಕ್ಕದ್ದು.

*3 ಕಾರ್ಯಸಾಧ್ಯ ಪಾಲನೆ ಮತ್ತು ಗ್ರೂಪ್ನ ಎಲ್ಲಾ ಅಧಿಕಾರಿಗಳು ಮತ್ತು ಉದ್ಯೋಗಿಗಳ ಪ್ರಾಮಾಣಿಕತೆಯನ್ನು ಖಚಿತಪಡಿಸಲು ಸ್ಥಾಪಿಸಲಾಗಿರುವ ಮಾನದಂಡಗಳಿಗೆ ಉಲ್ಲೇಖವಾಗುತ್ತದೆ.

## 3. "ಪಾಲನೆ ಮತ್ತು ಪ್ರಾಮಾಣಿಕತೆ" ಎಂದರೇನು

ಈ ಮಾರ್ಗದರ್ಶನ ಅಥವಾ ಗ್ರೂಪ್ ಒಳಗೆ ಉಲ್ಲೇಖವಾಗುವ "ಪಾಲನೆ ಮತ್ತು ಪ್ರಾಮಾಣಿಕತೆ" ಎಂದರೆ, ವ್ಯವಹಾರಗಳನ್ನು ನಡೆಸುವಾಗ ಅನ್ವಯವಾಗುವ ಕಾನೂನುಗಳು, ನಿಯಂತ್ರಣಗಳು, ಮತ್ತು ವ್ಯವಹಾರ ನೀತಿ ಹಾಗೂ "Yaskawa Group ನೀತಿ ಸಂಹಿತೆ," "ನಮ್ಮ ಬದ್ಧತೆಗಳು," ನಮ್ಮ ಆಂತರಿಕ ನಿಯಮಗಳು ಮತ್ತು ಪ್ರಾಮಾಣಿಕತೆ ಇವುಗಳೊಂದಿಗೆ ನಮ್ಮ ನಡವಳಿಕೆಗಳು, ಇದನ್ನು Yaskawa Groupನ ಎಲ್ಲಾ ಅಧಿಕಾರಿಗಳು ಮತ್ತು ಉದ್ಯೋಗಿಗಳು ಅನುಸರಿಸಬೇಕು.

## 4. ಅಧಿಕಾರಿಗಳು ಮತ್ತು ವ್ಯವಸ್ಥಾಪಕರ ಜವಾಬ್ದಾರಿಗಳು

■ ಎಲ್ಲಾ ಅಧಿಕಾರಿಗಳು ಯಾವಾಗಲೂ ನಿರ್ವಹಣಾ ವಾತಾವರಣ ಮತ್ತು ಸಾಮಾಜಿಕ ಅಗತ್ಯತೆಗಳಲ್ಲಿನ ಉಂಟಾಗುವ ಬದಲಾವಣೆಗಳನ್ನು ಗ್ರಹಿಸಬೇಕು, ಪಾಲನೆ ಮತ್ತು ಪ್ರಾಮಾಣಿಕತೆಯ ಅಭ್ಯಾಸಗಳಲ್ಲಿ ನಾಯಕತ್ವವನ್ನು ಚಲಾಯಿಸುವಾಗ "ಪಾಲನೆ ಮತ್ತು ಪ್ರಾಮಾಣಿಕತೆ ಕಾರ್ಯಕ್ರಮವನ್ನು" ಹೊಂದಿರಬೇಕು.

■ ಎಲ್ಲಾ ಅಧಿಕಾರಿಗಳು ನಿಯಮಿತ ಆಧಾರದಲ್ಲಿ ಎಲ್ಲಾ ಉದ್ಯೋಗಿಗಳು ಪಾಲನೆ ಮತ್ತು ಪ್ರಾಮಾಣಿಕತೆಗೆ ಅನುಗುಣವಾಗಿ ಸೂಕ್ತವಾಗಿ ನಡೆದುಕೊಳ್ಳುತ್ತಾರೆ ಎನ್ನುವುದನ್ನು ಪರಿಶೀಲಿಸಬೇಕು ಮತ್ತು ಯಾವುದೇ ಉಲ್ಲಂಘನೆಗಳನ್ನು ತಡೆಗಟ್ಟಲು ಪ್ರಯತ್ನಗಳನ್ನು ಮಾಡಬೇಕು.

■ ಯಾವುದೇ ಉಲ್ಲಂಘನೆಗಳ ಸಂದರ್ಭದಲ್ಲಿ, ಎಲ್ಲಾ ಅಧಿಕಾರಿಗಳು ಮತ್ತು ವ್ಯವಸ್ಥಾಪಕರು ಸ್ಥಳೀಯ/ಪ್ರಾಂತೀಯ ಪಾಲನಾ ಅಧಿಕಾರಿಗೆ ಮತ್ತು, ಅಗತ್ಯವಿದ್ದಲ್ಲಿ, YASKAWA Electric Corporationನ ಮುಖ್ಯ ಪಾಲನಾ ಅಧಿಕಾರಿಗೆ ವರದಿ ಮಾಡಬೇಕು ಮತ್ತು ಪಾಲನೆ ಮತ್ತು ಪ್ರಾಮಾಣಿಕತೆ ಸಮಸ್ಯೆಯ ವಿರುದ್ಧ ಸೂಕ್ತ ಕ್ರಮ(ಗಳು)ವನ್ನು ಜಾರಿಗೊಳಿಸಬೇಕು.

■ ಎಲ್ಲಾ ವ್ಯವಸ್ಥಾಪಕರು ಪಾಲನೆ ಮತ್ತು ಪ್ರಾಮಾಣಿಕತೆ ನಡವಳಿಕೆಯನ್ನು ಅಭ್ಯಾಸ ಮಾಡಬೇಕು, ಪಾಲನೆ ಮತ್ತು ಪ್ರಾಮಾಣಿಕತೆಗೆ ಸಂಬಂಧಿಸಿದಂತೆ ತಮ್ಮ ಕೆಳಗೆ ಕೆಲಸ ಮಾಡುತ್ತಿರುವವರಿಗೆ ಶಿಕ್ಷಣ ನೀಡಲು, ಜಾಗೃತಿ ಹೆಚ್ಚಿಸಲು ಮತ್ತು ಅವರಿಗೆ ಚಿರಪರಿಚಯ ಆಗುವಂತೆ ಮಾಡಲು ಸಮಂಜಸ ಪ್ರಯತ್ನಗಳನ್ನು ಮಾಡಬೇಕು ಮತ್ತು ತಮಗೆ ವರದಿ ಮಾಡಿಕೊಳ್ಳುತ್ತಿರುವ ತಮ್ಮ ಕೆಳಗೆ ಕೆಲಸ ಮಾಡುತ್ತಿರುವವರು ಪಾಲನೆ ಮತ್ತು ಪ್ರಾಮಾಣಿಕತೆಯ ಮಾರ್ಗದಲ್ಲಿ ಇರಲು ಅವರಿಗೆ ಬೇಕಾದ ನೆರವು ಮತ್ತು ಸಲಹೆಯನ್ನು ಅವರು ಪಡೆಯುತ್ತಾರೆ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು.

## 5. ಉದ್ಯೋಗಿಗಳ ಜವಾಬ್ದಾರಿಗಳು

■ ಎಲ್ಲಾ ಉದ್ಯೋಗಿಗಳು, ಪಾಲನೆ ಮತ್ತು ಪ್ರಾಮಾಣಿಕ ನಡವಳಿಕೆಗಳನ್ನು ತಮ್ಮ ದೈನಂದಿನ ಕೆಲಸದಲ್ಲಿ ಅಭ್ಯಾಸ ಮಾಡಲು, ತಮ್ಮನ್ನು ತಾವು "Yaskawa Group ನೀತಿ ಸಂಹಿತೆ" ಮತ್ತು "ನಮ್ಮ ಬದ್ಧತೆಗಳು" ಕುರಿತು ಚಿರಪರಿಚಿತರಾಗುವರು ಎಂದು ನಿರೀಕ್ಷಿಸಲಾಗಿದೆ. "ನಮ್ಮ ಬದ್ಧತೆಗಳು" ಜೊತೆಗೆ ಪಾಲನೆಯಲ್ಲಿ ಪ್ರಾಮಾಣಿಕತೆಯ ಜೊತೆಗೆ ಪ್ರತಿಯೊಬ್ಬ ಉದ್ಯೋಗಿಯ ಅರಿವಿನ ನಡವಳಿಕೆಗಳು Yaskawa Groupನ ಗೌರವ ಮತ್ತು ವಿಶ್ವಾಸವನ್ನು ಹೆಚ್ಚಿಸುವುವು.

## 6. ಶೂನ್ಯ-ಸಹಿಷ್ಣುತಾ ನೀತಿ

■ Yaskawa Groupನ ಎಲ್ಲಾ ಅಧಿಕಾರಿಗಳು ಮತ್ತು ಉದ್ಯೋಗಿಗಳು ಪಾಲನೆ ಮತ್ತು ಪ್ರಾಮಾಣಿಕತೆಗೆ ವಿರುದ್ಧವಾದ ಯಾವುದೇ ನಡವಳಿಕೆಯನ್ನು ಸಹಿಸಬಾರದು ಮತ್ತು ಇತರ ಅಧಿಕಾರಿಗಳು ಮತ್ತು ಉದ್ಯೋಗಿಗಳಿಗೆ ಪಾಲನೆ ಮತ್ತು ಪ್ರಾಮಾಣಿಕತೆಗೆ ವಿರುದ್ಧವಾದ ಸೂಚನೆ ನೀಡಬಾರದು.

■ ಎಲ್ಲಾ ಅಧಿಕಾರಿಗಳು ಮತ್ತು ಉದ್ಯೋಗಿಗಳು ವಾಸ್ತವಿಕ ಅಥವಾ ಶಂಕಿತ ಪಾಲನೆ ಮತ್ತು ಪ್ರಾಮಾಣಿಕತೆ ಕಳವಳಿ ಗಳಿಗೆ ಲೈನ್ ವ್ಯವಸ್ಥಾಪಕರು ಅಥವಾ Speak Up ಚಾನೆಲ್ಲುಗಳಿಗೆ ವರದಿ ಮಾಡುವ ಮತ್ತು ಅವರ ಸಲಹೆ ಕೋರುವ ಮೂಲಕ ಪರಿಹಾರವನ್ನು ಪಡೆದುಕೊಳ್ಳುತ್ತಾರೆಂದು ನಿರೀಕ್ಷಿಸಲಾಗಿದೆ.

■ ಕಾನೂನುಗಳು ಮತ್ತು ನಿಯಂತ್ರಣಗಳು, ವ್ಯವಹಾರ ನೀತಿ, ಆಂತರಿಕ ನಿಯಮಗಳು ಮತ್ತು/ಅಥವಾ "Yaskawa Group ನೀತಿ ಸಂಹಿತೆ" ಬಗೆಗಿನ ಅಜ್ಞಾನ ಅಥವಾ ಕಂಪನಿಯ ಹಿತಾಸಕ್ತಿಗಳನ್ನು ರಕ್ಷಿಸುವ ಉದ್ದೇಶವು ಪಾಲನೆ ಮತ್ತು ಪ್ರಾಮಾಣಿಕತೆಗೆ ವಿರುದ್ಧವಾದ ಯಾವುದೇ ನಡವಳಿಕೆಗೆ ಸಮರ್ಥನೆ ಆಗುವುದಿಲ್ಲ.

■ ಪಾಲನೆ ಮತ್ತು ಪ್ರಾಮಾಣಿಕತೆಗೆ ವಿರುದ್ಧವಾದ ಯಾವುದೇ ನಡವಳಿಕೆಯನ್ನು ಪ್ರದರ್ಶಿಸುವ ಅಧಿಕಾರಿ ಅಥವಾ ಉದ್ಯೋಗಿಯು, ನಡವಳಿಕೆಯ ಸ್ಥಿತಿ, ಪ್ರಭಾವ ಮತ್ತು ಸ್ಥಿತಿಗಳನ್ನು ಪರಿಗಣಿಸಿ, ಸಂಬಂಧಿತ ಕಂಪನಿಯ ನಿಯಮಗಳಿಗೆ ಅನುಗುಣವಾಗಿ ಶಿಸ್ತಿನ ಕ್ರಮ(ಗಳು)ಕ್ಕೆ ಒಳಪಡಬಹುದು.

# II YASKAWA GROUP ನೀತಿ ಸಂಹಿತೆ

**(ಜಾರಿ 2010* ಮತ್ತು ಪರಿಷ್ಕರಣೆ 2016)**

ಗ್ರೂಪ್ ಅಭಿಯಾನದ ಉದ್ದೇಶ ಸಮಾಜದ ಆಧುನಿಕತೆ ಮತ್ತು ಮಾನವರ ಯೋಗಕ್ಷೇಮಕ್ಕಾಗಿ ಕೊಡುಗೆ ನೀಡಲು ನಮ್ಮ ವ್ಯವಹಾರ ಪ್ರಯತ್ನಗಳನ್ನು ಬಳಸುವುದು ಎಂದು ಹೇಳುವ Yaskawa Group ನಿರ್ವಹಣಾ ತತ್ವವನ್ನು ಪೂರೈಸಲು, ಜಾಗತಿಕ ಸಮುದಾಯದ ಒಬ್ಬ ಸದಸ್ಯನಾಗಿ, ವ್ಯವಹಾರವನ್ನು ನ್ಯಾಯೋಚಿತ ಮತ್ತು ವಿಧೇಯ ರೀತಿಯಲ್ಲಿ ನಡೆಸುವುದು ಮತ್ತು ಜಾಗತಿಕ ಸಮುದಾಯದ ಜೊತೆಗೆ ಭರವಸೆಯ ಬಾಂಧವ್ಯವನ್ನು ಬಲಪಡಿಸುವುದು ಅತ್ಯಗತ್ಯ ಎಂದು Yaskawa Group ಭಾವಿಸುತ್ತದೆ. ಮೇಲೆ ನಮೂದಿಸಿರುವುದರ ಕಾರಣದಿಂದ, ಕೆಳಗೆ ಪಟ್ಟಿ ಮಾಡಿರುವ 16 ತತ್ವಗಳಿಗೆ ಅನುಗುಣವಾಗಿ, Yaskawa Group ಮಾನವ ಹಕ್ಕುಗಳನ್ನು ಗೌರವಿಸುವುದು, ಅನ್ವಯವಾಗುವ ಕಾನೂನುಗಳು ಮತ್ತು ನಿಯಂತ್ರಣಗಳನ್ನು ಮತ್ತು ಅದರ ಸತ್ವವನ್ನು ಪಾಲಿಸುವುದು, ಮತ್ತು ಉತ್ತಮ ಸಮಾಜ ವಿಜ್ಞಾನದ ಆಧಾರದ ಮೇಲೆ ಸಮರ್ಥನೀಯ ಸಮಾಜವನ್ನು ನಿರ್ಮಿಸಲು ಪೂರ್ವಭಾವಿಯಾಗಿ ಕೆಲಸ ಮಾಡುವುದಕ್ಕೆ ಬದ್ಧವಾಗಿರುತ್ತದೆ.

1. Yaskawa Group ತನ್ನ ಕಾರ್ಯಾಚರಣೆಗಳ ಮೂಲಕ ಸಮಾಜದ ಆಧುನಿಕತೆ ಮತ್ತು ಮನುಷ್ಯರ ಯೋಗಕ್ಷೇಮಕ್ಕೆ ಕೊಡುಗೆ ನೀಡುತ್ತದೆ. ಮೇಲ್ಕಂಡ ಸತ್ಯಾಂಶಗಳನ್ನು ಮುಂದಿಟ್ಟುಕೊಂಡು, Yaskawa Group ಪ್ರತಿಯೊಂದೂ ದೇಶ ಅಥವಾ ಪ್ರಾಂತದ ಜಾಗತಿಕ ಸಮುದಾಯಗಳು ಮತ್ತು ಸಂಸ್ಕೃತಿ ಮತ್ತು ಸಂಪ್ರದಾಯವನ್ನು ಗೌರವಿಸುತ್ತದೆ, ಕಾನೂನುಗಳು ಮತ್ತು ನಿಯಂತ್ರಣಗಳನ್ನು ಪಾಲಿಸುತ್ತದೆ ಮತ್ತು ಕಂಪನಿಯ ನೀತಿಗಳು ಅನ್ವಯವಾಗುವ ಶಾಸನಕ್ಕೆ ಅನುಗುಣವಾಗಿ ಇರುವುದನ್ನು ಖಚಿತಪಡಿಸಿಕೊಳ್ಳುತ್ತದೆ. ಶಾಸನ ಅಥವಾ ನೀತಿಯ ಅನುಪಸ್ಥಿತಿಯಲ್ಲಿ Yaskawa Group ಪ್ರಾಮಾಣಿಕತೆಯನ್ನು ಆಧಾರಿಸಿದ ಕ್ರಿಯಾ ಮಾರ್ಗವನ್ನು ಆಯ್ದುಕೊಳ್ಳುತ್ತದೆ.

2. Yaskawa Group ಜಾಗತಿಕ ಪರಿಸರದ ಸಂರಕ್ಷಣೆಯು ಎಲ್ಲಾ ಮಾನವರಿಗೆ ಅತ್ಯಂತ ಪ್ರಮುಖ ವಿಷಯಗಳಲ್ಲಿ ಒಂದಾಗಿದೆ ಎನ್ನುವುದನ್ನು ಮಾನ್ಯತೆ ಮಾಡುತ್ತದೆ. ನಮ್ಮ ವ್ಯವಹಾರ ಕಾರ್ಯಾಚರಣೆಯ ಪ್ರತಿಯೊಂದೂ ಹಂತದಲ್ಲಿ, Yaskawa Group ಪೂರ್ವಭಾವಿ ಪರಿಸರದ ದೃಷ್ಟಿಯಿಂದ ಜಾಗೃತ ಕ್ರಮಗಳ ಮೂಲಕ ಸಮರ್ಥನೀಯ ಸಮಾಜದ ನಿರ್ಮಾಣವನ್ನು ಸಾಧಿಸಲು ಕೊಡುಗೆ ನೀಡುತ್ತದೆ.

3. Yaskawa Group ಪ್ರತಿಯೊಂದೂ ದೇಶದ ಸ್ಪರ್ಧೆಯ ಕಾನೂನುಗಳನ್ನು ಪಾಲಿಸುತ್ತದೆ ಮತ್ತು ಕೂಟವನ್ನು ಹೊಂದಲಾಗಿದೆ ಎಂಬ ಶಂಕೆಗೆ ಎಡೆ ಮಾಡಿಕೊಡಬಹುದಾದ ರೀತಿಯಲ್ಲಿ ಅದು ತನ್ನ ಸ್ಪರ್ಧಿಗಳೊಂದಿಗೆ ಸಂಪರ್ಕ ಹೊಂದುವುದಿಲ್ಲ. Yaskawa Group ಸ್ಪರ್ಧೆಯನ್ನು ತಡೆಗಟ್ಟುವಿಕೆ ಅಥವಾ ನಿಯಂತ್ರಿಸುವ ಉದ್ದೇಶದೊಂದಿಗೆ ಸ್ಪರ್ಧಿಗಳೊಂದಿಗೆ ಯಾವುದೇ ಒಪ್ಪಂದಗಳನ್ನು ಮಾಡಿಕೊಳ್ಳುವುದಿಲ್ಲ ಅಥವಾ ಅವರೊಂದಿಗೆ ಸಂಘಟಿತ ಅಭ್ಯಾಸಗಳಲ್ಲಿ ಭಾಗವಹಿಸುವುದಿಲ್ಲ.

4. Yaskawa Group ತನ್ನದೇ ಆದ ಹಕ್ಕುಗಳನ್ನು ರಕ್ಷಿಸಿಕೊಳ್ಳುವ ಮೂಲಕ ಮತ್ತು ಇತರರ ಹಕ್ಕುಗಳನ್ನು ಉಲ್ಲಂಘಿಸದೆ ಇರುವ ಮೂಲಕ ಪೇಟೆಂಟ್ ಹಕ್ಕುಗಳು, ಕಾಪಿರೈಟ್ಸ್ ಮತ್ತು ಟ್ರೇಡ್ಮಾರ್ಕ್ ಹಕ್ಕುಗಳಂತಹ ಬೌದ್ಧಿಕ ಆಸ್ತಿ ಹಕ್ಕುಗಳನ್ನುಗೌರವಿಸುತ್ತದೆ.

5. Yaskawa Group ನ ನೀತಿಗಳು ಮತ್ತು ಕಾರ್ಯವಿಧಾನಗಳು ಕೇವಲ ತನ್ನದೇ ಆಗಿರುವ ಮಾಹಿತಿಯನ್ನು ಮಾತ್ರವಲ್ಲ, ಬದಲಾಗಿ ಇತರ ಕಂಪನಿಗಳ ಕುರಿತ ಪ್ರಮುಖ ಮಾಹಿತಿ ಮತ್ತು ವೈಯಕ್ತಿಕ ಮಾಹಿತಿಯನ್ನೂ ಸಹ ರಕ್ಷಿಸುತ್ತವೆ. Yaskawa Group ಯಾವುದೇ ಆಂತರಿಕ ವ್ಯಕ್ತಿಗಳು ಟ್ರೇಡಿಂಗ್ ಮಾಡುವುದನ್ನು ಪ್ರೋತ್ಸಾಹಿಸುವುದಿಲ್ಲ ಮತ್ತು ಸಹಿಸುವುದಿಲ್ಲ.

6. Yaskawa Group ಕಂಪನಿ ಮಾಹಿತಿ ಬಹಿರಂಗಪಡಿಸುವಿಕೆ ನಿಯಮಗಳನ್ನು ಪಾಲಿಸುತ್ತದೆ ಮತ್ತು ನಿಖರವಾದ ಮಾಹಿತಿಯನ್ನು ಕಾಲಕ್ರಮದಲ್ಲಿ ಬಹಿರಂಗಪಡಿಸಲು ಶ್ರಮಿಸುತ್ತದೆ.

7. Yaskawa Group ಮಾಹಿತಿಯನ್ನು ಸರಿಯಾಗಿ ಸೃಷ್ಟಿಸುತ್ತದೆ ಮತ್ತು ಸೂಕ್ತ ರೀತಿಯಲ್ಲಿ ಸಂಗ್ರಹಿಸುತ್ತದೆ ಮತ್ತು ತನ್ನ ಕಾರ್ಯಾಚರಣೆಯ ಸಮಯದಲ್ಲಿ ಪ್ರಮುಖ ವ್ಯವಹಾರ ನಿರ್ಣಯಗಳು ಮತ್ತು ನಿರ್ಧಾರ ಗಳನ್ನು ಸೂಕ್ತವಾಗಿ ಮಾಡಲು ಆಧಾರಗಳನ್ನು ದಾಖಲಿಸುತ್ತದೆ..

8. Yaskawa Group ಸೂಕ್ತ ಲೆಕ್ಕಪತ್ರ ಮತ್ತು ತೆರಿಗೆ ಪ್ರಕ್ರಿಯೆಯನ್ನು ದೇಶಗಳು, ಪ್ರಾಂತ್ಯಗಳು, ಸ್ಥಳೀಯ ಸರ್ಕಾರಗಳು ರೂಪಿಸಿರುವ ನಿಯಂತ್ರಣಗಳಿಗೆ ಅನುಗುಣವಾಗಿ, ಸಾಮಾನ್ಯವಾಗಿ ಸ್ವೀಕೃತವಾದ ಲೆಕ್ಕಪತ್ರದ ತತ್ವಗಳನ್ನು ಬಳಸಿಕೊಂಡು ಕೈಗೊಳ್ಳುತ್ತದೆ, ಹಾಗೂ ಸಂಸ್ಥೆಯ ಆಸ್ತಿಗಳ ಮೌಲ್ಯವನ್ನು ರಕ್ಷಿಸಲು ಉತ್ತಮ ನಿಯಂತ್ರಣ ಹೊಂದುತ್ತದೆ.

9. Yaskawa Group ಎಲ್ಲಾ ಅನ್ವಯವಾಗುವ ಕಾನೂನುಗಳು, ಸುಗ್ರೀವಾಜ್ಞೆಗಳು ಮತ್ತು ನಿಯಮಗಳನ್ನು ಭದ್ರತಾ ವ್ಯಾಪಾರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪಾಲಿಸುತ್ತದೆ. ಮೇಲಾಗಿ, ನಾವು ಭದ್ರತಾ ವ್ಯಾಪಾರ ನಿಯಂತ್ರಣವನ್ನು ಕಾರ್ಗೋ ಮತ್ತು/ಅಥವಾ ತಂತ್ರಜ್ಞಾನದ ಶಿಪ್ಮೆಂಟ್ ಮೂಲಕ ವಿಚಾರಣೆಯಿಂದ ನಡೆಸುತ್ತೇವೆ.

*YASKAWA Electric Corporationಗಾಗಿ ನೀತಿ ಸಂಹಿತೆಯನ್ನು 1997ರಲ್ಲಿ ಜಾರಿಗೊಳಿಸಲಾಯಿತು ಮತ್ತು ಅದನ್ನು 2010ರಲ್ಲಿ "Yaskawa Group ಕಾರ್ಪೋರೇಟ್ ಚಟುವಟಿಕೆ ಮಾನದಂಡಗಳು" ಎಂದು ಸುಧಾರಣೆ ಮಾಡಲಾಯಿತು.

⑩ Yaskawa Group ಸೂಕ್ತ ಬೇಡಿಕೆ ಪೂರೈಕೆ ಮತ್ತು ಮಾರಾಟ ದಾಖಲೆ ಹಾಗೂ ಸೂಕ್ತವಾಧ ಕ್ರೆಡಿಟ್ ನಿರ್ವಹಣೆಯನ್ನು ಕೈಗೊಳ್ಳುತ್ತದೆ.

⑪ Yaskawa Group ಸುಧೀರ್ಘ ಸುರಕ್ಷಾ ಮತ್ತು ಗುಣಮಟ್ಟ ನಿಯಂತ್ರಣವನ್ನು ಗ್ರಾಹಕ-ಕೇಂದ್ರಿತ ದೃಷ್ಟಿಕೋನದಿಂದ ಮತ್ತು ಗ್ರಾಹಕರ ಅಭಿಪ್ರಾಯಗಳಿಗೆ ಸಕಾಲಿಕ ಮತ್ತು ಸೂಕ್ತ ರೀತಿಯಲ್ಲಿ ಸ್ಪಂದಿಸುವುದನ್ನು ಜಾರಿಗೊಳಿಸುವ ಮೂಲಕ ಗ್ರಾಹಕರ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಲು ನಿರಂತರ ಸುಧಾರಣೆಗಳನ್ನು ಸಾಧಿಸಲು ಶ್ರಮಿಸುತ್ತದೆ.

⑫ Yaskawa Group ತನ್ನ ಸರಬರಾಜುದಾರರ ಮೌಲ್ಯಾಂಕನ ಮಾಡುವ ಮತ್ತು ಸೂಕ್ತ ಪಾವತಿ ಕಾರ್ಯವಿಧಾನಗಳನ್ನು ಜಾರಿಗೊಳಿಸುವ ಮೂಲಕ ದಕ್ಷ ಖರೀದಿಗಾಗಿ ಶ್ರಮಿಸುತ್ತದೆ. Yaskawa Group ತನ್ನ ಸರಬರಾಜುದಾರರನ್ನೂ ಸಹ ತನ್ನ ಪಾಲನಾ ನೀತಿಗಳಿಗೆ ಬದ್ಧರಾಗಿರುವಂತೆ ಕೋರುತ್ತದೆ.

⑬ Yaskawa Group ಗುತ್ತಿಗೆ ಪಡೆದಿರುವ ವ್ಯವಹಾರ ಸಂಸ್ಥೆಗಳ ಪಾಲನೆ ಮತ್ತು ಪ್ರಾಮಾಣಿಕತೆಯನ್ನು ಅವರೊಂದಿಗೆ ಕಾರ್ಯಗತಗೊಳಿಸಲಾಗಿರುವ ಗುತ್ತಿಗೆಯ ನಿಯಮಗಳು ಮತ್ತು ನಿಬಂಧನೆಗಳ ಮೂಲಕ ಖಚಿತಪಡಿಸುತ್ತದೆ.

⑭ Yaskawa Group ಸಮುದಾಯಗಳಿಗೆ ತನ್ನ ಕಾರ್ಯಾಚರಣೆ ಮತ್ತು ಕೊಡುಗೆಯನ್ನು ಪೂರ್ವಭಾವಿಯಾಗಿ ನೀಡುತ್ತದೆ ಮತ್ತು ಸೂಕ್ತವಲ್ಲದ ವ್ಯವಹಾರ ಮನರಂಜನೆ, ಉಡುಗೊರೆಗಳು, ದಾನಗಳು ಅಥವಾ ನೆರವುಗಳನ್ನು ನೀಡುವುದು ಮತ್ತು ಸ್ವೀಕರಿಸುವುದರಿಂದ ದೂರವಿರುತ್ತದೆ. Yaskawa Group ಲಂಚ ನೀಡುವುದಿಲ್ಲ ಅಥವಾ ಲಂಚ ನೀಡುವುದರ ಪ್ರಯತ್ನವೆಂದು ಶಂಕಿಸಬಹುದಾದ ರೀತಿಯಲ್ಲಿ ವರ್ತಿಸುವುದಿಲ್ಲ.

⑮ Yaskawa Group ದೇಶಗಳು, ಪ್ರಾಂತ್ಯಗಳು ಮತ್ತು ಸ್ಥಳೀಯ ಸರ್ಕಾರಗಳು ರೂಪಿಸಿರುವ ಕಾರ್ಮಿಕ ಕಾನೂನುಗಳು ಮತ್ತು ನಿಯಂತ್ರಣಗಳನ್ನು ಪಾಲಿಸುತ್ತದೆ.

⑯ Yaskawa Group ವ್ಯಕ್ತಿಗತ ಮಾನವ ಹಕ್ಕುಗಳು ಮತ್ತು ಮೌಲ್ಯಗಳ ವೈವಿಧ್ಯತೆಯನ್ನು ಗೌರವಿಸುತ್ತದೆ ಮತ್ತು ನಮ್ಮ ವಿಶ್ವಾದ್ಯಂತ ಇರುವ "Yaskawa ಎಚ್ ಆರ್ ಮೌಲ್ಯಗಳು" ಅನುಸಾರ ಚಟುವಟಿಕೆಗಳನ್ನು ಕೈಗೊಳ್ಳುತ್ತದೆ.



# III ನಮ್ಮ ಬದ್ಧತೆಗಳು

ಎಲ್ಲಾ ಅಧಿಕಾರಿಗಳು ಮತ್ತು ಉದ್ಯೋಗಿಗಳಿಂದ ಪಾಲನೆ ಮತ್ತು ಪ್ರಾಮಾಣಿಕತೆ ಅಭ್ಯಾಸಗಳಿಗಾಗಿ "Yaskawa Group ನೀತಿ ಸಂಹಿತೆ" ಯ 16 ತತ್ವಗಳ ಅಂತರ್ಗತ ಸ್ಥಾಪಿಸಲಾಗಿರುವ ಮಾನದಂಡಗಳನ್ನು "ನಮ್ಮ ಬದ್ಧತೆಗಳು" ಎಂದು ಉಲ್ಲೇಖಿಸಲಾಗುತ್ತದೆ.






1 . ಪಾಲನೆ ಮತ್ತು ಪ್ರಾಮಾಣಿಕ, ಜವಾಬ್ದಾರಿಯುತ ನಡವಳಿಕೆ ........ 9

2 . ಪರಿಸರ-ಸ್ನೇಹಿ ವ್ಯವಹಾರ ಚಟುವಟಿಕೆಗಳ ಮೂಲಕ ಸಮರ್ಥನೀಯ ಸಮಾಜ ........ 10

3 . ನ್ಯಾಯೋಚಿತ ಸ್ಪರ್ಧೆ ........ 11

4 . ಭೌದ್ಧಿಕ ಆಸ್ತಿ ಹಕ್ಕುಗಳು ........ 12

5 . ಮಾಹಿತಿ ಭದ್ರತೆ ........ 13

6 . ಸಕಾಲಿಕ ಮತ್ತು ಸೂಕ್ತ ಬಹಿರಂಗಪಡಿಸುವಿಕೆ ........ 14

7 . ದಾಖಲೆ ನಿರ್ವಹಣೆ, ನ್ಯಾಯೋಚಿತ ಮತ್ತು ಪಾರದರ್ಶಕ ನಿರ್ಧಾರ-ಕೈಗೊಳ್ಳುವಿಕೆ ........ 15

8 . ಲೆಕ್ಕಪತ್ರ ಮತ್ತು ತೆರಿಗೆ ನಿಯಮಗಳ ಪಾಲನೆ ........ 16

9 . ಭದ್ರತಾ ವ್ಯಾಪಾರ ನಿಯಂತ್ರಣದ ಅತ್ಯುತ್ತಮ ನಿರ್ವಹಣೆ ........ 17

10 . ಮಾರಾಟ ಮತ್ತು ಸಾಲ ನಿರ್ವಹಣೆ ........ 18

11 . ಸುರಕ್ಷತೆ ಮತ್ತು ಗುಣಮಟ್ಟ ನಿಯಂತ್ರಣ ........ 19

12 . ಖರೀದಿ ಮತ್ತು ಸೂಕ್ತ ಪಾವತಿ ........ 20

13 . ಹಂಚಿಕೆದಾರರು, ಏಜೆಂಟರು ಮತ್ತು ಪ್ರತಿನಿಧಿಗಳೊಂದಿಗೆ ಬಾಂಧವ್ಯ ........ 21

14 . ಶ್ರೇಯಾಸಕ್ತರು ಮತ್ತು ಆಸಕ್ತ ಪಕ್ಷಗಳೊಂದಿಗೆ ಬಾಂಧವ್ಯಗಳು ........ 22

15 . ಕಾರ್ಮಿಕ ಕಾನೂನುಗಳ ಪಾಲನೆ ........ 23

16 . ತೃಪ್ತಿಕರ ಕಾರ್ಯಸ್ಥಳ ಪರಿಸರ ........ 24

# III ನಮ್ಮ ಬದ್ಧತೆಗಳು

## 1. ಪಾಲನೆ ಮತ್ತು ಪ್ರಾಮಾಣಿಕ, ಜವಾಬ್ದಾರಿಯುತ ನಡವಳಿಕೆ



### ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ತನ್ನ ಕಾರ್ಯಾಚರಣೆಗಳ ಮೂಲಕ ಸಮಾಜದ ಆಧುನಿಕತೆ ಮತ್ತು ಮನುಷ್ಯರ ಯೋಗಕ್ಷೇಮಕ್ಕೆ ಕೊಡುಗೆ ನೀಡುತ್ತದೆ. ಮೇಲ್ಕಂಡ ಸತ್ಯಾಂಶಗಳನ್ನು ಮುಂದಿಟ್ಟುಕೊಂಡು, Yaskawa Group ಪ್ರತಿಯೊಂದೂ ದೇಶ ಅಥವಾ ಪ್ರಾಂತದ ಜಾಗತಿಕ ಸಮುದಾಯಗಳು ಮತ್ತು ಸಂಸ್ಕೃತಿ ಮತ್ತು ಸಂಪ್ರದಾಯವನ್ನು ಗೌರವಿಸುತ್ತದೆ, ಕಾನೂನುಗಳು ಮತ್ತು ನಿಯಂತ್ರಣಗಳನ್ನು ಪಾಲಿಸುತ್ತದೆ ಮತ್ತು ಕಂಪನಿಯ ನೀತಿಗಳು ಅನ್ವಯವಾಗುವ ಶಾಸನಕ್ಕೆ ಅನುಗುಣವಾಗಿ ಇರುವುದನ್ನು ಖಚಿತಪಡಿಸಿಕೊಳ್ಳುತ್ತದೆ. ಶಾಸನ ಅಥವಾ ನೀತಿಯ ಅನುಪಸ್ಥಿತಿಯಲ್ಲಿ Yaskawa Group ಪ್ರಾಮಾಣಿಕತೆಯನ್ನು ಆಧಾರಿಸಿದ ಕ್ರಿಯಾ ಮಾರ್ಗವನ್ನು ಆಯ್ದುಕೊಳ್ಳುತ್ತದೆ.

## ನಮ್ಮ ಬದ್ಧತೆಗಳು

1. ನಾವು ನಮ್ಮ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಕಾನೂನುಗಳು ಮತ್ತು ನಿಯಂತ್ರಣಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಶ್ರಮಿಸುತ್ತೇವೆ.

2. ನಾವು ನಮ್ಮ ವ್ಯವಹಾರ ಚಟುವಟಿಕೆಗಳು ಅನ್ವಯವಾಗುವ ಕಾನೂನುಗಳು ಮತ್ತು ನಿಯಂತ್ರಣಗಳ ಉಲ್ಲಂಘನೆ ಮಾಡುತ್ತಿಲ್ಲ ಎಂದು ಖಚಿತಪಡಿಸಿಕೊಳ್ಳಲು ಶ್ರಮಿಸುತ್ತೇವೆ.

3. ನಾವು ಅಧಿಕಾರಿಗಳಿಂದ ಎಲ್ಲಾ ಅವಶ್ಯಕ ಅನುಮತಿಗಳನ್ನು ಹೊಂದಿದ್ದೇವೆ ಮತ್ತು ಕಾನೂನಾತ್ಮಕವಾಗಿ ಕಡ್ಡಾಯವಾದ ವರದಿ ಮಾಡುವಿಕೆಯನ್ನು ಅನುಸರಿಸುತ್ತಿದ್ದೇವೆ ಎಂದು ಖಚಿತಪಡಿಸಿಕೊಳ್ಳುತ್ತೇವೆ. ನಮ್ಮ ಕಾರ್ಯಾಚರಣೆಗಳಿಗೆ ಅವಶ್ಯಕ ಇರುವಂತೆ ನಾವು ಕಾನೂನಾತ್ಮಕವಾಗಿ ಅರ್ಹ ವ್ಯಕ್ತಿಗಳನ್ನು ನಮ್ಮ ಸಿಬ್ಬಂದಿಯಾಗಿ ಅಥವಾ ರೀಟೇನರ್ ಆಗಿ ಹೊಂದಿದ್ದೇವೆ ಎಂಬುದನ್ನು ಖಚಿತಪಡಿಸಿಕೊಳ್ಳುತ್ತೇವೆ.

4. ನಾವು ನಮ್ಮ ಕಾರ್ಯಾಚರಣೆಗಳ ವಿವರಗಳು, ಜವಾಬ್ದಾರಿಗಳು ಮತ್ತು ಅಧಿಕಾರವನ್ನು ಪರೀಕ್ಷಿಸುತ್ತೇವೆ ಮತ್ತು ಅವಶ್ಯಕ ಅಧಿಕಾರ ನೀಡುವಿಕೆ ಮತ್ತು ವರದಿ ಮಾಡುವ ಕಾರ್ಯವಿಧಾನಗಳನ್ನು ಅನುಸರಿಸುವ ಮೂಲಕ ನಮ್ಮ ಕಂಪನಿಯ ನಿಯಮಗಳನ್ನು ಪಾಲಿಸುತ್ತೇವೆ.

5. ನಾವು ಕಾನೂನಾತ್ಮಕ ತಿದ್ದುಪಡಿಗಳು ಮತ್ತು ಕಾರ್ಯಾಚರಣಾ ಪರಿಷ್ಕರಣೆಗಳಿಗೆ ಪ್ರತಿಸ್ಪಂದಿಸಿ ಸಕಾಲದಲ್ಲಿ ನಮ್ಮ ಕಂಪನಿಯ ನಿಯಮಗಳನ್ನು ಪರಿಷ್ಕರಿಸುತ್ತೇವೆ.

## 2. ಪರಿಸರ-ಸ್ನೇಹಿ ವ್ಯವಹಾರ ಚಟುವಟಿಕೆಗಳ ಮೂಲಕ ಸಮರ್ಥನೀಯ ಸಮಾಜ



### ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ ("ಪರಿಸರದ ತತ್ವ")

Yaskawa Group ಜಾಗತಿಕ ಪರಿಸರದ ಸಂರಕ್ಷಣೆಯು ಎಲ್ಲಾ ಮಾನವರಿಗೆ ಅತ್ಯಂತ ಪ್ರಮುಖ ವಿಷಯಗಳಲ್ಲಿ ಒಂದಾಗಿದೆ ಎನ್ನುವುದನ್ನು ಮಾನ್ಯತೆ ಮಾಡುತ್ತದೆ. ನಮ್ಮ ವ್ಯವಹಾರ ಕಾರ್ಯಾಚರಣೆಯ ಪ್ರತಿಯೊಂದೂ ಹಂತದಲ್ಲಿ, Yaskawa Group ಪೂರ್ವಭಾವಿ ಪರಿಸರದ ದೃಷ್ಟಿಯಿಂದ ಜಾಗೃತ ಕ್ರಮಗಳ ಮೂಲಕ ಸಮರ್ಥನೀಯ ಸಮಾಜದ ನಿರ್ಮಾಣವನ್ನು ಸಾಧಿಸಲು ಕೊಡುಗೆ ನೀಡುತ್ತದೆ.

## ನಮ್ಮ ಬದ್ಧತೆಗಳು ("ಪಾರಿಸರಿಕ ಕ್ರಮಗಳ ಮಾರ್ಗದರ್ಶನಗಳು")

❶ ಜೈವಿಕವೈವಿಧ್ಯತೆಯ ಸಂರಕ್ಷಣೆ, ಮತ್ತು ಅತ್ಯಲ್ಪ-ಕಾರ್ಬನ್ ಮತ್ತು ಪುನರ್ಬಳಕೆ-ಆಧಾರಿತ ಸಮಾಜದ ಸೃಷ್ಟಿಯನ್ನು ಸಾಧಿಸಲು ನಾವೆಲ್ಲರೂ ಭಾಗವಹಿಸಬೇಕು ಮತ್ತು ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ನಾವು ಬಲವಾಗಿ ನಂಬುತ್ತೇವೆ.

❷ ಸಮಾಜದ ಭವಿಷ್ಯದ ಸಮೃದ್ಧಿಗೆ, ನಾವು ವಿಶ್ವಾದ್ಯಂತ ಸಮುದಾಯಗಳಲ್ಲಿ ವ್ಯಾಪಕ ಶ್ರೇಣಿಯ ಬಳಕೆಗಳಿಗೆ ಉಪಯುಕ್ತವಾಗುವ ತಂತ್ರಜ್ಞಾನದ ಆವಿಷ್ಕಾರದೊಂದಿಗೆ ಅಭಿವೃದ್ಧಿಪಡಿಸಿರುವ ನಮ್ಮ ಉತ್ಪನ್ನಗಳು ಮತ್ತು ಸೇವೆಗಳ ಮೂಲಕ ಜಾಗತಿಕ  ಪರಿಸರದ ಸುಧಾರಣೆಗೆ ಕೊಡುಗೆ ನೀಡುತ್ತೇವೆ.

❸ ನಾವು ನಮ್ಮ ಉತ್ಪನ್ನಗಳು ಮತ್ತು ಸೇವೆಗಳ ಪಾರಿಸರಿಕ ಪ್ರಭಾವಗಳನ್ನು ಕಡಿಮೆ ಮಾಡಲು, ಅವುಗಳ ಸಂಪೂರ್ಣ ಜೀವ-ಆವೃತ್ತಿಗೆ, ಸಂಶೋಧನೆ ಮತ್ತು ಅಭಿವೃದ್ಧಿ, ಉತ್ಪನ್ನದ ವಿನ್ಯಾಸ, ಖರೀದಿ, ಉತ್ಪಾದನೆ, ಹಂಚಿಕೆ ಮತ್ತು ಬಳಕೆಯಿಂದ ಹಿಡಿದು ಅವುಗಳ ಜೀವಾಂತ್ಯದವರೆಗೆ ನಿರ್ವಹಿಸುವವರೆಗೆ ಶ್ರಮಿಸುತ್ತೇವೆ.

❹ ನಾವು ಅನ್ವಯವಾಗುವ ಪಾರಿಸರಿಕ ಕಾನೂನುಗಳು ಮತ್ತು ನಿಯಂತ್ರಣಗಳನ್ನು ಪಾಲಿಸುವ ಮೂಲಕ ಮಾತ್ರವಲ್ಲದೆ, ನಮ್ಮದೇ ಆದ ಭವಿಷ್ಯದ ಆಧಾರಿತಗುರಿಗಳು ಮತ್ತು ಧ್ಯೇಯೋದ್ದೇಶಗಳನ್ನೂ ಸ್ಥಾಪಿಸುವ ಮೂಲಕ ಸಾಮಾಜಿಕ ಮತ್ತು ಪಾರಿಸರಿಕ ಉತ್ಕೃಷ್ಟತೆಯನ್ನು ಉನ್ನತಿಯತ್ತ ಕೊಂಡೊಯ್ಯುವ ಗುರಿ ಹೊಂದಿದ್ದೇವೆ. ನಾವು ನಮ್ಮ ಪಾರಿಸರಿಕ ನಿರ್ವಹಣೆಯನ್ನು ಸುಧಾರಿಸುವುದು ಮತ್ತು ಪಾರಿಸರಿಕ ಅಪಾಯಗಳನ್ನು ಕನಿಷ್ಠಗೊಳಿಸುವ ಪ್ರಯತ್ನಗಳನ್ನು ಮುಂದುವರೆಸುತ್ತೇವೆ.

❺ ನಾವು ವಿಸ್ತೃತ ದೃಷ್ಟಿಕೋನದಿಂದ ಪರಿಸರದೊಂದಿಗೆ ನಮ್ಮ ಬಾಂಧವ್ಯದ ಕುರಿತು ಶಿಕ್ಷಣ ಮತ್ತು ಅರಿವು ಮೂಡಿಸುವ ಮೂಲಕ ನಮ್ಮೆಲ್ಲರಲ್ಲಿ ಪಾರಿಸರಿಕ ಜಾಗೃತಿ ಸುಧಾರಿಸಲು ಶ್ರಮಿಸುತ್ತೇವೆ, ಇದರಿಂದ ನಾವು ಪ್ರತಿಯೊಬ್ಬರೂ ಸ್ವತಂತ್ರರಾಗಿ ಪಾರಿಸರಿಕ ಚಟುವಟಿಕೆಗಳನ್ನು ಜಾರಿಗೊಳಿಸಲು ಸಾಧ್ಯವಾಗುವುದು.

❻ ನಾವು ನಮ್ಮ ಪಾರಿಸರಿಕ ಚಟುವಟಿಕೆಗಳ ಕುರಿತು ಮಾಹಿತಿಯನ್ನು ಬಹಿರಂಗಪಡಿಸಲು ಮತ್ತು ಆಳವಾದ ಪರಸ್ಪರ ತಿಳುವಳಿಕೆಗಾಗಿ ಶ್ರೇಯಾಸಕ್ತರೊಂದಿಗೆ ಪೂರ್ವಭಾವಿಯಾಗಿ ಮತ್ತು ಮುಕ್ತವಾಗಿ ಸಂವಹನೆ ಮಾಡಲು ಬದ್ಧರಾಗಿದ್ದೇವೆ.

# ನಮ್ಮ ಬದ್ಧತೆಗಳು

## 3. ನ್ಯಾಯೋಚಿತ ಸ್ಪರ್ಧೆ



### ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ಪ್ರತಿಯೊಂದೂ ದೇಶದ ಸ್ಪರ್ಧೆಯ ಕಾನೂನುಗಳನ್ನು ಪಾಲಿಸುತ್ತದೆ ಮತ್ತು ಕೂಟವನ್ನು ಹೊಂದಲಾಗಿದೆ ಎಂಬ ಶಂಕೆಗೆ ಎಡೆ ಮಾಡಿಕೊಡಬಹುದಾದ ರೀತಿಯಲ್ಲಿ ಅದು ತನ್ನ ಸ್ಪರ್ಧಿಗಳೊಂದಿಗೆ ಸಂಪರ್ಕ ಹೊಂದುವುದಿಲ್ಲ. Yaskawa Group ಸ್ಪರ್ಧೆಯನ್ನು ತಡೆಗಟ್ಟುವಿಕೆ ಅಥವಾ ನಿಯಂತ್ರಿಸುವ ಉದ್ದೇಶದೊಂದಿಗೆ ಸ್ಪರ್ಧಿಗಳೊಂದಿಗೆ ಯಾವುದೇ ಒಪ್ಪಂದಗಳನ್ನು ಮಾಡಿಕೊಳ್ಳುವುದಿಲ್ಲ ಅಥವಾ ಅವರೊಂದಿಗೆ ಸಂಘಟಿತ ಅಭ್ಯಾಸಗಳಲ್ಲಿ ಭಾಗವಹಿಸುವುದಿಲ್ಲ.

## ನಮ್ಮ ಬದ್ಧತೆಗಳು

1. ನಾವು ಅನಗತ್ಯವಾಗಿ ಸ್ಪರ್ಧಿಗಳನ್ನು ಸಂಪರ್ಕಿಸುವುದಿಲ್ಲ ಅಥವಾ, ಅಂತಹ ಸಂಪರ್ಕವು ಅಗತ್ಯವಾದರೆ, ಸ್ಪರ್ಧಿಗಳೊಂದಿಗೆ ಸ್ಪರ್ಧಾತ್ಮಕ ಮಾಹಿತಿ ಕುರಿತು ಒಪ್ಪುವುದಿಲ್ಲ ಅಥವಾ ಚರ್ಚಿಸುವುದಿಲ್ಲ ಅಥವಾ ಕೂಟವನ್ನು ಹೊಂದಲಾಗಿದೆ ಎಂಬ ಶಂಕೆಗೆ ಎಡೆ ಮಾಡಿಕೊಡಬಹುದಾದ ರೀತಿಯಲ್ಲಿ ನಡೆದುಕೊಳ್ಳುವುದಿಲ್ಲ. ನಾವು ಅಂತಹ ಕ್ರಮಗಳನ್ನು ನಮ್ಮ ಹಂಚಿಕೆದಾರರು, ಏಜೆಂಟರು, ಪ್ರತಿನಿಧಿಗಳು ಮತ್ತು ಯಾವುದೇ ಇತರ ಗುತ್ತಿಗೆ ಪಡೆದಿರುವ ವ್ಯವಹಾರ ಸಂಸ್ಥೆಗಳ ಮೂಲಕವೂ ಕೈಗೊಳ್ಳುವುದಿಲ್ಲ.

2. ನಿರ್ಮಾಣ ಅಥವಾ ವ್ಯವಹಾರಕ್ಕಾಗಿ ಬಿಡ್ ಪ್ರವೇಶಿಸುವಾಗ, ಅದು ಸಾರ್ವಜನಿಕ ಅಥವಾ ಖಾಸಗಿ ಕ್ಷೇತ್ರದಲ್ಲಿರಲಿ, ನಾವು ಕಾನೂನುಗಳು ಮತ್ತು ನಮ್ಮ ಕಂಪನಿಯ ನಿಯಮಗಳಿಗೆ ಅನುಗುಣವಾಗಿ ನಡೆದುಕೊಳ್ಳುತ್ತೇವೆ ಮತ್ತು ನ್ಯಾಯೋಚಿತ ಮತ್ತು ಸಮಾನಾವಕಾಶದ ಬಿಡ್ಡಿಂಗ್ ಪ್ರಕ್ರಿಯೆಗೆ ಅಡ್ಡಿಪಡಿಸುವ ಏನನ್ನೂ ಮಾಡುವುದಿಲ್ಲ.

3. ಆಂತರಿಕ ದಾಖಲೆಗಳಲ್ಲಿ ಕೈಗಾರಿಕಾ ಅಂಕಿಅಂಶಗಳು, ಬೆಂಚ್ ಮಾರ್ಕಿಂಗ್ ಕೆಲಸಗಳು ಇತ್ಯಾದಿಯನ್ನು ದಾಖಲಿಸುವಾಗ, ನಾವು ಮಾಹಿತಿಯ ಮೂಲವನ್ನು ನಿರ್ದಿಷ್ಟವಾಗಿ ನಮೂದಿಸುತ್ತೇವೆ.

4. ನಾವು ಎಚ್ಚರಿಕೆಯಿಂದ ಸ್ಪರ್ಧಾತ್ಮಕ ಬುದ್ಧಿವಂತಿಕೆಯನ್ನು ನಿಯಂತ್ರಿಸುತ್ತೇವೆ ಮತ್ತು, ಕೈಗಾರಿಕಾ ಸಂಘಕ್ಕೆ ಅಂಕಿಅಂಶಗಳ ಮಾಹಿತಿಯನ್ನು ಸಲ್ಲಿಸುವಾಗ, ಕೂಟವನ್ನು ಹೊಂದಲಾಗಿದೆ ಎಂಬ ಶಂಕೆಯನ್ನು ದೂರಮಾಡಲು ಹೆಚ್ಚು ಎಚ್ಚರಿಕೆ ವಹಿಸುತ್ತೇವೆ.

# 4. ಬೌದ್ಧಿಕ ಆಸ್ತಿ ಹಕ್ಕುಗಳು



## ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ತನ್ನದೇ ಆದ ಹಕ್ಕುಗಳನ್ನು ರಕ್ಷಿಸಿಕೊಳ್ಳುವ ಮೂಲಕ ಮತ್ತು ಇತರರ ಹಕ್ಕುಗಳನ್ನು ಉಲ್ಲಂಘಿಸದೆ ಇರುವ ಮೂಲಕ ಪೇಟೆಂಟ್ ಹಕ್ಕುಗಳು, ಕಾಪಿರೈಟ್ಸ್ ಮತ್ತು ಟ್ರೇಡ್ಮಾರ್ಕ್ ಹಕ್ಕುಗಳಂತಹ ಬೌದ್ಧಿಕ ಆಸ್ತಿ ಹಕ್ಕುಗಳನ್ನುಗೌರವಿಸುತ್ತದೆ.

## ನಮ್ಮ ಬದ್ಧತೆಗಳು

1. ನಾವು ಅನ್ಯರ ಭೌದ್ಧಿಕ ಆಸ್ತಿ ಹಕ್ಕುಗಳನ್ನು ಉಲ್ಲಂಘಿಸದಿರುವ ಕಡೆಗೆ ನಿಕಟ ಗಮನ ಹರಿಸುತ್ತೇವೆ, ಸೂಕ್ತ ಪರಿಗಣನೆ ಇಲ್ಲದೆ ಅನ್ಯರ ಉತ್ಪನ್ನಗಳನ್ನು ನಕಲು ಮಾಡುವುದರಿಂದ ದೂರವಿರುತ್ತೇವೆ, ಮತ್ತು ಅವರ ಅನುಮತಿ ಇಲ್ಲದೆ ಅವರ ಭೌದ್ಧಿಕ ಆಸ್ತಿಗಳನ್ನು ಬಳಸದಿರುವ ಬಗ್ಗೆ ಹೆಚ್ಚಿನ ಎಚ್ಚರಿಕೆ ವಹಿಸುತ್ತೇವೆ.

2. ನಾವು ಕಂಪ್ಯೂಟರ್ ಕಾರ್ಯಕ್ರಮಗಳನ್ನು ಅಧಿಕಾರ ಪಡೆಯದೆ ನಕಲು ಮಾಡುವುದಿಲ್ಲ. ಮೇಲಾಗಿ, ನಾವು ನಮ್ಮ ಕಂಪನಿಯಿಂದ ಒದಗಿಸಲಾಗಿರುವ ಕಂಪ್ಯೂಟರುಗಳು, ಟ್ಯಾಬ್ಲೆಟುಗಳು ಮತ್ತು ಸೆಲ್ ಫೋನುಗಳಲ್ಲಿ ಸುರಕ್ಷತೆಯನ್ನು ಖಚಿತಪಡಿಸಿಕೊಂಡಿರದ ಯಾವುದೇ ಸಾಫ್ಟ್ ವೇರ್ ಅನ್ನು ಅನುಸ್ಥಾಪನೆ ಮಾಡುವುದಿಲ್ಲ.

3. ನಾವು ನಮ್ಮದೇ ಆದ ಭೌದ್ಧಿಕ ಆಸ್ತಿಗೆ ಆ ಹಕ್ಕುಗಳನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ಅನ್ಯರ ಭೌದ್ಧಿಕ ಆಸ್ತಿ ಹಕ್ಕುಗಳ ಉಲ್ಲಂಘನೆಯನ್ನು ತಡೆಗಟ್ಟುವುದನ್ನು ಪ್ರೋತ್ಸಾಹಿಸುತ್ತೇವೆ. ಸ್ವಾಧೀನಪಡಿಸಿಕೊಳ್ಳುವ ಮುಂಚೆ, ನಾವು ನಮ್ಮ ಅನ್ವೇಷಣೆಗಳು ಮತ್ತು ಜ್ಞಾನದ ವಿಷಯವಸ್ತುಗಳನ್ನು ಗೌಪ್ಯವಾಗಿ ಸಹ ಇರಿಸುತ್ತೇವೆ.

4. ತಾಂತ್ರಿಕ ವರದಿಗಳು ಅಥವಾ ಪ್ರಬಂಧಗಳನ್ನು ವೈಜ್ಞಾನಿಕ ಕಾರ್ಯಾಗಾರಗಳು ಅಥವಾ ನಿಯತಕಾಲಿಕಗಳಿಗೆ ಪ್ರಸ್ತುತಿ ಅಥವಾ ಬಿಡುಗಡೆ ಮಾಡುವ ಮುಂಚೆ, ಒಂದು ವೇಳೆ ಅವುಗಳು ಗೌಪ್ಯವಾಗಿ ಇರಿಸಬೇಕಾದ Yaskawa Groupನ ತಾಂತ್ರಿಕ ಮಾಹಿತಿಯನ್ನು ಒಳಗೊಂಡಿವೆಯೇ ಎಂದು ಪರೀಕ್ಷಿಸುತ್ತೇವೆ. ಅವುಗಳಲ್ಲಿ ಯಾವುದಾದರೂ ಒಳಗೊಂಡಿದ್ದರೆ, ಅದರ ಪ್ರಸ್ತುತಿ ಅಥವಾ ಬಿಡುಗಡೆಯ ಮುಂಚೆ ಅದನ್ನು ವಿಮರ್ಶಿಸಲು ನಾವು ನಮ್ಮ ಬೌದ್ಧಿಕ ಆಸ್ತಿ ಉಸ್ತುವಾರಿ ಸಿಬ್ಬಂದಿಯನ್ನು ಹೊಂದಿದ್ದೇವೆ.

# ನಮ್ಮ ಬದ್ಧತೆಗಳು

## 5. ಮಾಹಿತಿ ಭದ್ರತೆ



### ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Groupನ ನೀತಿಗಳು ಮತ್ತು ಕಾರ್ಯವಿಧಾನಗಳು ಕೇವಲ ತನ್ನದೇ ಆಗಿರುವ ಮಾಹಿತಿಯನ್ನು ಮಾತ್ರವಲ್ಲ, ಬದಲಾಗಿ ಇತರ ಕಂಪನಿಗಳ ಕುರಿತ ಪ್ರಮುಖ ಮಾಹಿತಿ ಮತ್ತು ವೈಯಕ್ತಿಕ ಮಾಹಿತಿಯನ್ನೂ ಸಹ ರಕ್ಷಿಸುತ್ತವೆ. Yaskawa Group ಯಾವುದೇ ಆಂತರಿಕ ವ್ಯಕ್ತಿಗಳು ಟ್ರೇಡಿಂಗ್ ಮಾಡುವುದನ್ನು ಪ್ರೋತ್ಸಾಹಿಸುವುದಿಲ್ಲ ಮತ್ತು ಸಹಿಸುವುದಿಲ್ಲ.

### ನಮ್ಮ ಬದ್ಧತೆಗಳು

1. ನಾವು ಕಾರ್ಯಾಚರಣೆಗಳ ಸಮಯದಲ್ಲಿ ಸೃಷ್ಟಿಸಿರುವ ಅಥವಾ ಸ್ವೀಕರಿಸಿರುವ ಎಲ್ಲಾ ಮಾಹಿತಿಯು ನಮ್ಮ ಸಂಸ್ಥೆಯ ಆಸ್ತಿಗಳು ಮತ್ತು ಜವಾಬ್ದಾರಿ ಆಗಿವೆ ಎಂಬುದನ್ನು ಒಪ್ಪುತ್ತೇವೆ ಮತ್ತು ಅವುಗಳ ಸೂಕ್ತ ನಿರ್ವಹಣೆ ಮತ್ತು ಪರಿಣಾಮಕಾರಿ ಭದ್ರತೆಯನ್ನು ಖಚಿತಪಡಿಸಿಕೊಳ್ಳುತ್ತೇವೆ.

2. ನಾವು ಈ-ಮೇಲ್ ಮೂಲಕ ಗೌಪ್ಯತಾ ಮಾಹಿತಿಯನ್ನು ಸುಲಭವಾಗಿ ಬಹಿರಂಗಪಡಿಸದಿರಲು ಹೆಚ್ಚು ಎಚ್ಚರಿಕೆ ವಹಿಸುತ್ತೇವೆ. ಗೌಪ್ಯತಾ ಮಾಹಿತಿಯನ್ನು ರಕ್ಷಿಸಬೇಕು ಮತ್ತು ಅದರ ಯಾವುದೇ ಪ್ರವಹನೆಯು ಅಧಿಕೃತ ಅನುಮತಿ ಹೊಂದಿರಬೇಕು ಎಂದು ಅರ್ಥಮಾಡಿಕೊಂಡಿರುತೇವೆ.

3. ನಾವು ಒಂದು ವೇಳೆ ನಮ್ಮ ಸಂಸ್ಥೆಯಿಂದ ಒದಗಿಸಿರುವ ಕಂಪ್ಯೂಟರ್ ಅಥವಾ ಮೊಬೈಲ್ ಫೋನ್ ಕಳೆದುಹೋದಲ್ಲಿ ಅಥವಾ ನಮ್ಮ ಸರ್ವರ್ ಮೇಲಿನ ಆಕ್ರಮಣ ಅಥವಾ ಮಾಹಿತಿ ಸೋರಿಕೆಯನ್ನು ಗಮನಿಸಿದಲ್ಲಿ ತಕ್ಷಣವೇ ನಾವು ನಮ್ಮ ಕಾರ್ಯಸ್ಥಳದ ಮಾಹಿತಿ ವ್ಯವಸ್ಥಾಪಕರು ಅಥವಾ ಮಾಹಿತಿ ವ್ಯವಸ್ಥೆಗಳ ಇಲಾಖೆಯನ್ನು ಸಂಪರ್ಕಿಸುತ್ತೇವೆ ಮತ್ತು ಅವರಿಂದ ಬರುವ ಯಾವುದೇ ಸೂಚನೆಗಳನ್ನು ಅನುಸರಿಸುತ್ತೇವೆ.

4. ಸಾಮಾಜಿಕ ಜಾಲದ ಸೇವೆಗಳನ್ನು ಬಳಸುವಾಗ, ನಾವು ಯಾವುದೇ ಗೌಪ್ಯತಾ ಮಾಹಿತಿಯನ್ನು ಪೋಸ್ಟ್ ಮಾಡುವುದಿಲ್ಲ ಮತ್ತು ನಮ್ಮ ಸಂಸ್ಥೆಗೆ ಅಥವಾ ಯಾವುದೇ ಆಸಕ್ತ ಪಕ್ಷಕ್ಕೆ ಅಗೌರವ ಅಥವಾ ನಕಾರಾತ್ಮಕ ಆಗದಂತೆ ಮುನ್ನೆಚ್ಚರಿಕೆ ವಹಿಸುತ್ತೇವೆ.

# 6. ಸಕಾಲಿಕ ಮತ್ತು ಸೂಕ್ತ ಬಹಿರಂಗಪಡಿಸುವಿಕೆಗಳು



## ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ಕಂಪನಿ ಮಾಹಿತಿ ಬಹಿರಂಗಪಡಿಸುವಿಕೆ ನಿಯಮಗಳನ್ನು ಪಾಲಿಸುತ್ತದೆ ಮತ್ತು ನಿಖರವಾದ ಮಾಹಿತಿಯನ್ನು ಕಾಲಕ್ರಮದಲ್ಲಿ ಬಹಿರಂಗಪಡಿಸಲು ಶ್ರಮಿಸುತ್ತದೆ.

## ನಮ್ಮ ಬದ್ಧತೆಗಳು

1. ನಮ್ಮ ಕಂಪನಿ ಅಥವಾ ನಮ್ಮ ಯಾವುದೇ ಸಾರ್ವಜನಿಕವಾಗಿ-ಪಟ್ಟಿಮಾಡಿರುವ ಪಾಲುದಾರ ಕಂಪನಿಗಳ ಮೇಲೆ ಪ್ರಭಾವ ಬೀರಬಹುದಾದ ಪ್ರಮುಖ ಸತ್ಯಾಂಶಗಳು ನಮ್ಮ ಅರಿವಿಗೆ ಬಂದರೆ, ನಾವು ನಮ್ಮ ಮೇಲಾಧಿಕಾರಿ ಅಥವಾ ಇಲಾಖೆಯನ್ನು ಸಂಪರ್ಕಿಸುತ್ತೇವೆ.

2. ನಾವು ನಮ್ಮ ಕಂಪನಿ ಅಥವಾ ನಮ್ಮ ಸಾರ್ವಜನಿಕವಾಗಿ-ಪಟ್ಟಿ ಮಾಡಿರುವ ಪಾಲುದಾರ ಕಂಪನಿಗಳ ಆಂತರಿಕ ಮಾಹಿತಿಗೆ ಸಂಪರ್ಕ ಹೊಂದಿದ್ದರೆ, ಅಂತಹ ಮಾಹಿತಿಯನ್ನು ಸಾರ್ವಜನಿಕರಿಗೆ ಅಂತಹ ಬಹಿರಂಗಪಡಿಸು ತನಕ ಸಂಬಂಧಿಸಿರುವ ಕಂಪನಿಯ ಶೇರುಗಳನ್ನು ಖರೀದಿಸುವುದಿಲ್ಲ ಅಥವಾ ಮಾರುವುದಿಲ್ಲ. ನಾವು ಆಂತರಿಕ ಮಾಹಿತಿಯನ್ನು ಇತರ ಪಕ್ಷಗಳಿಗೆ ಬಹಿರಂಗಪಡಿಸುವುದಿಲ್ಲ, ಪರಿವಾರದ ಸದಸ್ಯರಿಗೂ ಕೂಡ.

3. ನಾವು ಕಾನೂನುಗಳು ಮತ್ತು ನಿಯಂತ್ರಣಗಳು ಅಥವಾ ಶೇರು ವಿನಿಮಯ ಕೇಂದ್ರದ ನಿಯಂತ್ರಣಗಳ ಅನುಸಾರ ಬಹಿರಂಗಪಡಿಸಬೇಕಾದ ಮಾಹಿತಿಯನ್ನು ಅರ್ಥಮಾಡಿಕೊಂಡಿದ್ದೇವೆ, ಮತ್ತು ಅದನ್ನು ಕಾಲಕ್ರಮದಲ್ಲಿ ಮತ್ತು ಸೂಕ್ತ ರೀತಿಯಲ್ಲಿ ಬಹಿರಂಗಪಡಿಸುತ್ತೇವೆ.

4. ನಮ್ಮ ಕಂಪನಿಯ ಮಾಹಿತಿಯನ್ನು ಬಹಿರಂಗಪಡಿಸುವ ಮುಂಚೆ, ನಾವು ವಿವರಗಳನ್ನು ದೃಢಪಡಿಸಿಕೊಳ್ಳುತ್ತೇವೆ ಮತ್ತು ಮಾಹಿತಿ ಬಿಡುಗಡೆ ಮಾಡುವ ಅಧಿಕಾರ ಹೊಂದಿರುವ ವ್ಯವಸ್ಥಾಪಕರಿಂದ ಒಪ್ಪಿಗೆ ಪಡೆಯುತ್ತೇವೆ.

5. ನಾವು ನಮ್ಮ ಕಂಪನಿಯ ಪರವಾಗಿ ಸಂವಹನೆ ಮಾಡಲು ಅಧಿಕಾರ ಪಡೆದಿರುವ ಪ್ರತಿನಿಧಿಗಳ ಮೂಲಕ ಮಾತ್ರ ಸಾರ್ವಜನಿಕರಿಗೆ ಕಂಪನಿ ಮಾಹಿತಿಯನ್ನು ಬಹಿರಂಗಪಡಿಸುತ್ತೇವೆ. ನಾವು ನಮ್ಮ ಕಂಪನಿಯ ಒಪ್ಪಿಗೆ ಇಲ್ಲದೆ ಮಾಧ್ಯಮಗಳ ಜೊತೆಗೆ ಮಾತನಾಡುವುದಿಲ್ಲ.

# III ನಮ್ಮ ಬದ್ಧತೆಗಳು

## 7. ದಾಖಲೆ ನಿರ್ವಹಣೆ, ನ್ಯಾಯೋಚಿತ ಮತ್ತು ಪಾರದರ್ಶಕ ನಿರ್ಧಾರ-ಕೈಗೊಳ್ಳುವಿಕೆ



### ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ಮಾಹಿತಿಯನ್ನು ಸೂಕ್ತ ರೀತಿಯಲ್ಲಿ ಸೃಷ್ಟಿಸುತ್ತದೆ ಮತ್ತು ಸಂಗ್ರಹಿಸುತ್ತದೆ ಮತ್ತು ಕಾರ್ಯಾಚರಣೆಯ ಸಮಯದಲ್ಲಿ ಸೂಕ್ತವಾಗಿ ಪ್ರಮುಖ ವ್ಯವಹಾರ ತೀರ್ಪುಗಳು ಮತ್ತು ನಿರ್ಧಾರ-ಕೈಗೊಳ್ಳುವಿಕೆಯ ಕಾರಣಗಳನ್ನು ದಾಖಲಿಸುತ್ತದೆ.

## ನಮ್ಮ ಬದ್ಧತೆಗಳು

1. ನಾವು ಅನ್ಯರತಪ್ಪು ತಿಳುವಳಿಕೆಗೆ ಎಡೆಮಾಡಿಕೊಡಬಹುದಾದ ಯಾವುದೇ ಮಾಹಿತಿಯನ್ನು (ಈ-ಮೇಲ್ ಸೇರಿದಂತೆ ಸೃಷ್ಟಿಸುವುದಿಲ್ಲ, ಪಡೆಯುವುದಿಲ್ಲ ಮತ್ತು ಸಂಗ್ರಹಿಸುವುದಿಲ್ಲ.

2. ನಾವು ನಮ್ಮ ಕಂಪನಿ ನಿಯಮಗಳಿಗೆ ಅನುಗುಣವಾಗಿ ನಮ್ಮ ಕಂಪನಿಯ ಮಾಹಿತಿಯನ್ನು ಕ್ರೋಢೀಕರಿಸುತ್ತೇವೆ, ಯಾವ ಮಾಹಿತಿಯನ್ನು ಸಂಗ್ರಹಿಸಬೇಕು ಎಂಬುದನ್ನು ನಿಯಮಿತವಾಗಿ ಸ್ಪಷ್ಟಪಡಿಸುತ್ತೇವೆ, ಮತ್ತು ಸ್ವಾಧೀನ ಹೊಂದುವಿಕೆ ಅವಧಿಗಳನ್ನು ರೂಪಿಸುವುದರ ಜೊತೆಗೆ ಪಾಲಿಸುತ್ತೇವೆ. ನಾವು ಕಾರ್ಯಾಚರಣೆಯ ಭಾಗವಾಗಿ ಪ್ರಮುಖ ವ್ಯವಹಾರ ನಿರ್ಣಯಗಳು ಮತ್ತು ನಿರ್ಧಾರ-ಕೈಗೊಳ್ಳುವಿಕೆಯ ಸೂಕ್ತತೆಯನ್ನು ಸಮರ್ಥಿಸುವ ಸೂಕ್ತ ರೀತಿಯಲ್ಲಿ ದಾಖಲೆಗಳು ಮತ್ತು ವಹಿವಾಟು ರೆಕಾರ್ಡುಗಳನ್ನು ಸಂಗ್ರಹಿಸುತ್ತೇವೆ.

3. ಯಾವುದೇ ಕಾನೂನಾತ್ಮಕ ಅಥವಾ ನೈತಿಕ ಸಮಸ್ಯೆಗಳು ಎದುರಾದಾಗ, ನಾವು ದಾಖಲೆಗಳನ್ನು ನಾಶಪಡಿಸುವುದು ಅಥವಾ ನಮ್ಮದೇ ವಿವೇಚನೆಯ ಅನುಸಾರ ದತ್ತಾಂಶವನ್ನು ತೆಗೆದುಹಾಕುವಂತಹ, ಸಾಕ್ಷಿಯ ನಾಶವೆಂದು ಶಂಕಿಸಬಹುದಾದ ರೀತಿಯಲ್ಲಿ ಕೆಲಸ ಮಾಡುವುದಿಲ್ಲ,

# 8. ಲೆಕ್ಕಪತ್ರ ಮತ್ತು ತೆರಿಗೆ ನಿಯಮಗಳ ಪಾಲನೆ




## ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ಸೂಕ್ತ ಲೆಕ್ಕಪತ್ರ ಮತ್ತು ತೆರಿಗೆ ಪ್ರಕ್ರಿಯೆಯನ್ನು ದೇಶಗಳು, ಪ್ರಾಂತ್ಯಗಳು, ಸ್ಥಳೀಯ ಸರ್ಕಾರಗಳು ರೂಪಿಸಿರುವ ನಿಯಂತ್ರಣಗಳಿಗೆ ಅನುಗುಣವಾಗಿ, ಸಾಮಾನ್ಯವಾಗಿ ಸ್ವೀಕೃತವಾದ ಲೆಕ್ಕಪತ್ರದ ತತ್ವಗಳನ್ನು ಬಳಸಿಕೊಂಡು ಕೈಗೊಳ್ಳುತ್ತದೆ, ಹಾಗೂ ಸಂಸ್ಥೆಯ ಆಸ್ತಿಗಳ ಮೌಲ್ಯವನ್ನು ರಕ್ಷಿಸಲು ಉತ್ತಮ ನಿಯಂತ್ರಣ ಹೊಂದುತ್ತದೆ.

## ನಮ್ಮ ಬದ್ಧತೆಗಳು

1. ನಾವು ಕಾನೂನುಗಳು ಮತ್ತು ನಿಯಂತ್ರಣಗಳು ಮತ್ತು ನಮ್ಮ ಕಂಪನಿ ನಿಯಮಗಳ ಆಧಾರದ ಮೇಲೆ ನಮ್ಮ ಕಂಪನಿಗೆ ಅನ್ವಯವಾಗುವ ಲೆಕ್ಕಪತ್ರದ ಮಾನದಂಡಗಳು ಇತ್ಯಾದಿಗಳ ತಿಳುವಳಿಕೆಯನ್ನು ಹೊಂದಲು ನಾವು ಪ್ರಯತ್ನವನ್ನು ಮಾಡುತ್ತೇವೆ, ಮತ್ತು ಸೂಕ್ತ ಕಾರ್ಪೋರೇಟ್ ಲೆಕ್ಕಪತ್ರ ಅಭ್ಯಾಸಗಳು ಮತ್ತು ತೆರಿಗೆ ಕಾನೂನುಗಳನ್ನು ಪಾಲಿಸುತ್ತೇವೆ.

2. ನಾವು ನಗದು ಮತ್ತು ಬ್ಯಾಂಕ್ ಖಾತೆಯ ಹಣಗಳು, ಸಂಗ್ರಹಾತ್ಮಕ ಆಸ್ತಿಗಳು, ನಿಗದಿತ ಆಸ್ತಿಗಳು, ಭೋಗ್ಯದ ಆಸ್ತಿಗಳು, ಮತ್ತು ಕಂಪ್ಯೂಟರುಗಳು ಮತ್ತು ಸಾಫ್ಟ್ ವೇರ್ ಅಂತಹ ಪ್ರಮುಖ ಆಸ್ತಿಗಳ ಲೆಡ್ಜರ್ ಸಂರಕ್ಷಿಸುತ್ತೇವೆ, ಇವುಗಳ ಜೊತೆಗೆ ವಾಸ್ತವಿಕ ವಸ್ತುಗಳನ್ನು ನಿಯಮಿತವಾಗಿ ಪರೀಕ್ಷಿಸುತ್ತೇವೆ.

3. ನಾವು ಕಾನೂನಾತ್ಮಕ ಕಾರ್ಯವಿಧಾನಗಳು ಮತ್ತು ಅಧಿಕಾರ ನೀಡುವಿಕೆ ಮೂಲಕ ನಮ್ಮ ಕಂಪನಿ ಆಸ್ತಿಗಳನ್ನು ಪಡೆದುಕೊಳ್ಳುತ್ತೇವೆ, ಬಳಸುತ್ತೇವೆ ಮತ್ತು ವಿಲೇವಾರಿ ಮಾಡುತ್ತೇವೆ ಮತ್ತು ಅವುಗಳನ್ನು ವ್ಯವಹಾರೇತರ ಉದ್ದೇಶಕ್ಕೆ ಬಳಸುವುದಿಲ್ಲ.

4. ಗ್ರೂಪ್ ಒಳಗೆ ಟ್ರೇಡಿಂಗ್ ನಡೆಯುವಾಗ, ಕ್ರೋಢೀಕರಿಸಿದ ಲೆಕ್ಕಗಳು ಹಾಗೂ ವಹಿವಾಟು ಬೆಲೆ ನಿಗಧಿಪಡಿಸುವಿಕೆ ಮತ್ತು ತೆರಿಗೆ ಕಾನೂನುಗಳ ಎಲ್ಲಾ ಅನ್ವಯವಾಗುವ ನಿಯಮಗಳ ಪಾಲನೆಗೆ ಗಮನ ನೀಡುತ್ತೇವೆ. ಅಗತ್ಯವಿದ್ದಲ್ಲಿ, ನಾವು ನಮ್ಮ ಲೆಕ್ಕ ಇಲಾಖೆಯೊಂದಿಗೆ ಸಕಾಲಿಕವಾಗಿ ಸಮಾಲೋಚಿಸುತ್ತೇವೆ.

## 9. ಭದ್ರತಾ ವ್ಯಾಪಾರ ನಿಯಂತ್ರಣದ ಅತ್ಯುತ್ತಮ ನಿರ್ವಹಣೆ



### ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ಭದ್ರತಾ ವ್ಯಾಪಾರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಅನ್ವಯವಾಗುವ ಕಾನೂನುಗಳು, ಸುಗ್ರೀವಾಜ್ಞೆಗಳು ಮತ್ತ ನಿಯಮಗಳನ್ನು ಪಾಲಿಸುತ್ತದೆ. ಮೇಲಾಗಿ, ನಾವು ಭದ್ರತಾ ವ್ಯಾಪಾರ ನಿಯಂತ್ರಣವನ್ನು ಕಾರ್ಗೋ ಮತ್ತು/ಅಥವಾ ತಂತ್ರಜ್ಞಾನದ ಶಿಪ್ಮೆಂಟ್ ಮೂಲಕ ವಿಚಾರಣೆಯಿಂದ ನಡೆಸುತ್ತೇವೆ.

## ನಮ್ಮ ಬದ್ಧತೆಗಳು

1. ನಾವು ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವ ಉದ್ದೇಶಕ್ಕಾಗಿ, ವ್ಯಾಪಕ-ವಿನಾಶದ ಶಸ್ತ್ರಾಸ್ತ್ರಗಳ ವಿತರಣೆಯನ್ನು ತಡೆಗಟ್ಟಲು ಮತ್ತು ಇತರ ಅಸ್ತ್ರಗಳ (ಸಾಂಪ್ರದಾಯಿಕ ಅಸ್ತ್ರಗಳು) ಸಂಗ್ರಹವನ್ನು ತಪ್ಪಿಸಲು ರಫ್ತು ನಿಯಂತ್ರಣವನ್ನು ಆಳುವ ಎಲ್ಲಾ ಅನ್ವಯವಾಗುವ ಕಾನೂನುಗಳು ಮತ್ತು ಸುಗ್ರೀವಾಜ್ಞೆಗಳನ್ನು ಪಾಲಿಸುತ್ತೇವೆ. ಆ ಕಾರಣಕ್ಕಾಗಿ, ನಾವು ಅವುಗಳನ್ನು ಪಾಲಿಸಲು ಆಂತರಿಕ ನಿಯಮಗಳು ಮತ್ತು ಪ್ರತಿಜ್ಞೆಯನ್ನು ವಿಕಾಸಗೊಳಿಸಿದ್ದೇವೆ.

2. ನಾವು ನಮ್ಮದೇ ಆದ ಆಂತರಿಕ ನಿಯಮಗಳ ಜೊತೆಗೆ, ರಫ್ತು ನಿಯಂತ್ರಣವನ್ನು ಆಳುವ ಎಲ್ಲಾ ಅನ್ವಯವಾಗುವ ಕಾನೂನುಗಳು ಮತ್ತು ಸುಗ್ರೀವಾಜ್ಞೆಗಳನ್ನು ಪಾಲಿಸುವ ಮೂಲಕ ರಫ್ತು ವ್ಯವಹಾರವನ್ನು ನಡೆಸುತ್ತೇವೆ, ಕೇವಲ ಜಪಾನಿನ ಕಾನೂನುಗಳು ಮತ್ತು ಸುಗ್ರೀವಾಜ್ಞೆಗಳು ಮಾತ್ರವಲ್ಲ, ಬದಲಾಗಿ ನಾವು ವ್ಯವಹಾರ ನಡೆಸುವ ವಿಶ್ವಾದ್ಯಂತ ಪ್ರತಿ ರಾಷ್ಟ್ರದ ಕಾನೂನುಗಳು ಮತ್ತು ಸುಗ್ರೀವಾಜ್ಞೆಗಳನ್ನು ಪಾಲಿಸುತ್ತೇವೆ,

3. ಆಮದು ಮಾಡಿಕೊಳ್ಳುವಾಗ ಮತ್ತು/ಅಥವಾ ರಫ್ತು ಮಾಡುವಾಗ, ನಾವು ಕಸ್ಟಮ್ಸ್ ಕಾಯಿದೆ ಅಂತಹ ಎಲ್ಲಾ ಅನ್ವಯವಾಗುವ ಕಾನೂನುಗಳು ಮತ್ತು ಸುಗ್ರೀವಾಜ್ಞೆಗಳ ಪಾಲನೆಯಲ್ಲಿ ಕಸ್ಟಮ್ಸ್ ಕ್ಲಿಯರೆನ್ಸ್ ಅನ್ನು ಅನುಸರಿಸುತ್ತೇವೆ. ನಾವು ಅಂತರರಾಷ್ಟ್ರೀಯ ಒಪ್ಪಂದಗಳ ಮೂಲಕ ಯಾವುದೇ ನಿಷೇಧವಾಗಿರುವ ಸರಕುಗಳ ಆಮದು ಮತ್ತು/ ಅಥವಾ ರಫ್ತು ವ್ಯಾಪಾರ ಮಾಡುವುದಿಲ್ಲ.

# 10. ಮಾರಾಟ ಮತ್ತು ಸಾಲ ನಿರ್ವಹಣೆ



## ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ಸೂಕ್ತ ಬೇಡಿಕೆ ಪೂರೈಕೆ ಮತ್ತು ಮಾರಾಟ ದಾಖಲಾತಿಯನ್ನು ಹಾಗೂ ಸೂಕ್ತ ಸಾಲ ನಿರ್ವಹಣೆಯನ್ನು ಕೈಗೊಳ್ಳುತ್ತದೆ.

## ನಮ್ಮ ಬದ್ಧತೆಗಳು

1. ನಾವು ಗ್ರಾಹಕರಿಂದ ಬೇಡಿಕೆಗಳು ಮತ್ತು ಯೋಜಿತ ಬೇಡಿಕೆಗಳ ಮಾಹಿತಿಯ ಆಧಾರದ ಮೇಲೆ ಬೇಡಿಕೆ ಪೂರೈಕೆಯನ್ನು ಕೈಗೊಳ್ಳುತ್ತೇವೆ.


2. ನಾವು ಗುತ್ತಿಗೆಗಳು, ಲಿಖಿತ ಅಂದಾಜುಪಟ್ಟಿಗಳು, ಬೇಡಿಕೆ ದೃಢೀಕರಣಗಳು, ಇತ್ಯಾದಿಯ ಮೂಲಕ ಒಪ್ಪಿರುವ ನಿಯಮಗಳು ಮತ್ತು ನಿಬಂಧನೆಗಳ ಸಾಕ್ಷಿಯಾಗಿ ವಹಿವಾಟುಗಳ ಪ್ರಮುಖ ನಿಬಂಧನೆಗಳನ್ನು ದಾಖಲಿಸುತ್ತೇವೆ.

3. ಮಾರಾಟ ವಹಿವಾಟುಗಳಲ್ಲಿ, ನಾವು ಉತ್ತಮ ಮಾರಾಟ ದಾಖಲಾತಿಯನ್ನು ಶಿಪ್ಮೆಂಟ್/ಡೆಲಿವರಿ ಮೇಲೆ ಅಥವಾ ಸೇವೆಯ ಅವಕಾಶ ಪೂರ್ಣಗೊಂಡ ಮೇಲೆ ಮಾಡುತ್ತೇವೆ. ನಾವು ಮಾರಾಟದ ಸುಳ್ಳು ದಾಖಲೆ, ನಿರೀಕ್ಷಣಾ ಅಥವಾ ವಿಳಂಬದ ದಾಖಲಾತಿ, ಮತ್ತು ಹೆಚ್ಚಾದ-ದಾಖಲಾತಿ ಅಥವಾ ಕಡಿಮೆಯಾದ-ದಾಖಲಾತಿ ಅಂತಹ ಸಮಂಜಸವಲ್ಲದ ಲೆಕ್ಕಪತ್ರದ ಕಾರ್ಯವಿಧಾನಗಳಿಂದ ಕಟ್ಟುನಿಟ್ಟಾಗಿ ದೂರವಿರುತ್ತೇವೆ.

4. ನಾವು ಗ್ರಾಹಕರ ಮೇಲೆ ಅವರ ಕ್ರೆಡಿಟ್-ಅರ್ಹತೆಯೂ ಸೇರಿದಂತೆ ಉತ್ತಮ ಕ್ರೆಡಿಟ್ ತನಿಖೆಗಳನ್ನು ಜಾರಿಗೊಳಿಸುವ ಮೂಲಕ ಸೂಕ್ತ ಕ್ರೆಡಿಟ್ ನಿರ್ವಹಣೆಯನ್ನು ಕೈಗೊಳ್ಳುತ್ತೇವೆ.

# III ನಮ್ಮ ಬದ್ಧತೆಗಳು

## 11. ಸುರಕ್ಷತೆ ಮತ್ತು ಗುಣಮಟ್ಟ ನಿಯಂತ್ರಣ




### ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ಸುಧೀರ್ಘ ಸುರಕ್ಷಾ ಮತ್ತು ಗುಣಮಟ್ಟ ನಿಯಂತ್ರಣವನ್ನು ಗ್ರಾಹಕ-ಕೇಂದ್ರಿತ ದೃಷ್ಟಿಕೋನದಿಂದ ಮತ್ತು ಗ್ರಾಹಕರ ಅಭಿಪ್ರಾಯಗಳಿಗೆ ಸಕಾಲಿಕ ಮತ್ತು ಸೂಕ್ತ ರೀತಿಯಲ್ಲಿ ಸ್ಪಂದಿಸುವುದನ್ನು ಜಾರಿಗೊಳಿಸುವ ಮೂಲಕ ಗ್ರಾಹಕರ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಲು ನಿರಂತರ ಸುಧಾರಣೆಗಳನ್ನು ಸಾಧಿಸಲು ಶ್ರಮಿಸುತ್ತದೆ.

## ನಮ್ಮ ಬದ್ಧತೆಗಳು

1. ನಾವು ಒದಗಿಸುವ ಉತ್ಪನ್ನಗಳ ಗುಣಮಟ್ಟ ಮತ್ತು ಸುರಕ್ಷತೆಯನ್ನು ಕಾಯ್ದುಕೊಳ್ಳಲು, ನಮ್ಮ ಕಂಪನಿಯ ನಿಯಮಗಳನ್ನು ಪಾಲಿಸುವ ಮೂಲಕ, ನಮ್ಮ ಗುಣಮಟ್ಟ ನಿಯಂತ್ರಣ ವ್ಯವಸ್ಥೆಯನ್ನು ಸುಧಾರಿಸಲು ಮತ್ತು ನಮ್ಮ ತಾಂತ್ರಿಕ ಅಭಿವೃದ್ಧಿ ಮತ್ತು ತಾಂತ್ರಿಕ ವೇದಿಕೆಯನ್ನು ಪರಿಷ್ಕರಿಸಲು ಶ್ರಮಿಸುತ್ತೇವೆ.

2. ನಾವು ಅಂತಿಮ ಬಳಕೆದಾರರ ಕೋರಿಕೆಗಳು ಮತ್ತು ವಿಚಾರಣೆಗಳಿಗೆ ಸಕಾಲದಲ್ಲಿ ಸತ್ಯಾಂಶಗಳ ದೃಢೀಕರಣದ ಆಧಾರದ ಮೇಲೆ ಸೂಕ್ತ ರೀತಿಯಲ್ಲಿ ಸ್ಪಂದಿಸುತ್ತೇವೆ.

3. ನಾವು ಅಂತಿಮ ಬಳಕೆದಾರರಿಗೆ ಅರ್ಥ ಮಾಡಿಕೊಳ್ಳಲು ಸುಲಭವಾಗುವ ರೀತಿಯಲ್ಲಿ ಕ್ಯಾಟಲಾಗ್ಸ್, ಉತ್ಪನ್ನ ವಿವರಣೆಗಳು, ಜಾಹೀರಾತುಗಳನ್ನು ಸೃಷ್ಟಿಸುತ್ತೇವೆ ಮತ್ತು ನಾವು ನಮ್ಮ ಗ್ರಾಹಕರ ಸುರಕ್ಷತೆಯನ್ನು ಪ್ರಥಮ ಆದ್ಯತೆಯಾಗಿ ಇರಿಸುತ್ತೇವೆ. ನಾವು ನಿರಂತರವಾಗಿ ಉತ್ಪನ್ನ ವಿವರಣಾ ದಾಖಲೆಗಳನ್ನು ಸುಧಾರಿಸಲು ಸಹ ಶ್ರಮಿಸುತ್ತೇವೆ.

4. ಉತ್ಪನ್ನ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸುರಕ್ಷತೆ, ಗುಣಮಟ್ಟ ಮತ್ತು ವಿಶ್ವಾಸಾರ್ಹತೆಯನ್ನು ಖಚಿತಪಡಿಸಿಕೊಳ್ಳಲು, ನಾವು ನಮ್ಮ ಕಾರ್ಯಾಚರಣೆಗಳು ಮತ್ತು ವಿಮರ್ಶೆಗಳನ್ನು ಅಂತಿಮ ಬಳಕೆದಾರರ ದೃಷ್ಟಿಕೋನದ ಮೇಲೆ ಆಧಾರಿಸಿರುತ್ತೇವೆ.

# 12. ಖರೀದಿ ಮತ್ತು ಸೂಕ್ತ ಪಾವತಿ



## ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ತನ್ನ ಸರಬರಾಜುದಾರರ ಮೌಲ್ಯಾಂಕನ ಮಾಡುವ ಮತ್ತು ಸೂಕ್ತ ಪಾವತಿ ಕಾರ್ಯವಿಧಾನಗಳನ್ನು ಜಾರಿಗೊಳಿಸುವ ಮೂಲಕ ದಕ್ಷ ಖರೀದಿಗಾಗಿ ಶ್ರಮಿಸುತ್ತದೆ. Yaskawa Group ತನ್ನ ಸರಬರಾಜುದಾರರನ್ನೂ ಸಹ ತನ್ನ ಪಾಲನಾ ನೀತಿಗಳಿಗೆ ಬದ್ಧರಾಗಿರುವಂತೆ ಕೋರುತ್ತದೆ.

## ನಮ್ಮ ಬದ್ಧತೆಗಳು

1. ಸರಬರಾಜುದಾರರನ್ನು ಆಯ್ಕೆಮಾಡುವಾಗ, ನಾವು ಕೇವಲ ಗುಣಮಟ್ಟ, ಬೆಲೆ ಮತ್ತು ಡೆಲಿವರಿ ಸಮಯಗಳು ಮಾತ್ರವಲ್ಲ ಬದಲಾಗಿ ತಾಂತ್ರಿಕ ಮತ್ತು ಕಾರ್ಯಾಚರಣಾ ಸಾಮರ್ಥ್ಯತೆ, ವ್ಯವಹಾರ ಸುಸ್ಥಿತಿ, ಕಾನೂನಿನ ಪಾಲನೆ, ಪರಿಸರ ಸಂರಕ್ಷಣೆ, ಆರೋಗ್ಯ ಮತ್ತು ಸುರಕ್ಷತೆ, ಮತ್ತು ಇತರ ಮಾನದಂಡಗಳಂತಹ ಅವರ ವ್ಯವಸ್ಥೆಯ ಸ್ಥಿತಿಯ ಆಧಾರದ ಮೇಲೆ ವಿಸ್ತೃತ ಮೌಲ್ಯಾಂಕನ ಮತ್ತು ವೈಚಾರಿಕ ನಿರ್ಧಾರವನ್ನು ಮಾಡುತ್ತೇವೆ.

2. ಖರೀದಿ ವಹಿವಾಟುಗಳಲ್ಲಿ, ನಾವು ಬೇಡಿಕೆಯ ಯೂನಿಟ್ ಬೆಲೆಗಾಗಿ ಪ್ರತಿ ಸರಬರಾಜುದಾರರ ನಡುವಿನ ಒಪ್ಪಂದವನ್ನು ತೋರಿಸುವ ದಾಖಲೆಗಳು ಮತ್ತು ಉತ್ಪನ್ನಗಳು ಅಥವಾ ಸೇವೆಗಳನ್ನು ಸ್ವೀಕರಿಸಲಾಗಿದೆ ಎನ್ನುವ ಪುರಾವೆಗಳನ್ನು ಪಡೆದುಕೊಳ್ಳುತ್ತೇವೆ. ನಾವು ಸೂಕ್ತವಾದ ಕಾರ್ಯವಿಧಾನವನ್ನು ಅನುಸರಿಸುವ ಮೂಲಕ ಸತ್ಯಾಂಶಗಳೊಂದಿಗೆ ಹೊಂದುವ ಖರ್ಚುಗಳು, ವೆಚ್ಚಗಳ ಪ್ರಮಾಣ ಮತ್ತು ಸಮಯಗಳ ಉತ್ತಮ ದಾಖಲಾತಿಯನ್ನು ಕೈಗೊಳ್ಳುತ್ತೇವೆ,

3. ನಾವು ಯಾವುದೇ ಕಾನೂನುಗಳು ಮತ್ತು ನಿಯಂತ್ರಣಗಳ ಉಲ್ಲಂಘನೆ, ಹಿತಾಸಕ್ತಿಯ ಘರ್ಷಣೆಯ ಅಪಾಯ, ಅಥವಾ ಹಣ ಸಾಗಣೆಯ ಮೂಲಕ ಸಂಘಟಿತ ಅಪರಾಧ ಗುಂಪಿನೊಂದಿಗೆ ತೊಡಗಿರುವ ಅಪಾಯ, ಇತ್ಯಾದಿ ಇರುವುದೇ ಎಂಬ ಬಗ್ಗೆ ಖರೀದಿ ವಹಿವಾಟುಗಳಲ್ಲಿ ನಿಕಟ ಗಮನ ಹರಿಸುತ್ತೇವೆ. ನಾವು ಸಂಘಟಿತ ಅಪರಾಧ ಗುಂಪಿನೊಂದಿಗೆ ಯಾವುದೇ ರೀತಿಯ ಸಂಬಂಧ ಹೊಂದಿರುವುದಿಲ್ಲ ಮತ್ತು ಅದರ ಬೇಡಿಕೆಗಳ ವಿರುದ್ಧ ದೃಢ ನಿಲುವನ್ನು ತಾಳುತ್ತೇವೆ.

4. ನಾವು ವಹಿವಾಟು ಪ್ರಾರಂಭ ಆಗುವ ಮುಂಚೆ ಸರಬರಾಜುದಾರರು ಮತ್ತು ವ್ಯಾಪಾರ ಪಾಲುದಾರರಾಗಿ ಅವರ ಅರ್ಹತೆಯ ಕುರಿತು ಸತ್ಯಾಂಶಗಳನ್ನು ಪರೀಕ್ಷಿಸುತ್ತೇವೆ ಮತ್ತು ವಹಿವಾಟು ಪ್ರಾರಂಭ ಆದ ನಂತರ ಅವರನ್ನು ನಿಯಮಿತವಾಗಿ ಪುನ:ಪರೀಕ್ಷೆ ಮಾಡುತ್ತೇವೆ. ನಾವು ಸರಬರಾಜುದಾರರ ಉಪಗುತ್ತಿಗೆದಾರರ ಕುರಿತೂ ಸಹ ಸಾಧ್ಯವಾದಷ್ಟು ತಿಳಿದುಕೊಳ್ಳಲು ಪ್ರಯತ್ನಿಸುತ್ತೇವೆ.

# ನಮ್ಮ ಬದ್ಧತೆಗಳು

## 13. ಹಂಚಿಕೆದಾರರು, ಏಜೆಂಟರು ಮತ್ತು ಪ್ರತಿನಿಧಿಗಳೊಂದಿಗೆ ಬಾಂಧವ್ಯ



### ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ಗುತ್ತಿಗೆ ಪಡೆದಿರುವ ವ್ಯವಹಾರ ಸಂಸ್ಥೆಗಳ ಪಾಲನೆ ಮತ್ತು ಪ್ರಾಮಾಣಿಕತೆಯನ್ನು ಅವರೊಂದಿಗೆ ಕಾರ್ಯಗತಗೊಳಿಸಲಾಗಿರುವ ಗುತ್ತಿಗೆಯ ನಿಯಮಗಳು ಮತ್ತು ನಿಬಂಧನೆಗಳ ಮೂಲಕ ಖಚಿತಪಡಿಸುತ್ತದೆ.

## ನಮ್ಮ ಬದ್ಧತೆಗಳು

1. ನಾವು ನಮ್ಮ ಹಂಚಿಕೆದಾರರ ಮೂಲಕ ಮಾರಾಟ ವಹಿವಾಟುಗಳಲ್ಲಿ ಸಂಬಂಧಿತ ರಾಷ್ಟ್ರಗಳ ಸ್ಪರ್ಧಾ ಕಾನೂನುಗಳ ಉಲ್ಲಂಘನೆ ಮಾಡುವುದಿಲ್ಲ (ತೃತೀಯ ಪಕ್ಷಗಳ ಮೂಲಕ ಸ್ಪರ್ಧಿಗಳೊಂದಿಗೆ ಮರುಮಾರಾಟ ಬೆಲೆಗಳನ್ನು ನಿರ್ಬಂಧಗೊಳಿಸುವಿಕೆ ಅಥವಾ ಸ್ಪರ್ಧಾತ್ಮಕ ಇಂಟೆಲಿಜೆನ್ಸ್ ವಿನಿಮಯವೂ ಸೇರಿದಂತೆ).

2. ನಾವು ಅಂತಿಮ-ಬಳಕೆದಾರರಿಗೆ ಇರುವ ಹಂಚಿಕೆಯ ಚಾನೆಲ್ಲುಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇವೆ, ಮತ್ತು ರಫ್ತು ನಿಯಂತ್ರಣ, ಗೌಪ್ಯತಾ ಮಾಹಿತಿ ನಿಯಂತ್ರಣ, ಮತ್ತು ಉತ್ತಮ ಸಂಬಂಧಿತ ಡೆಲಿವರಿ ಸ್ಥಳಗಳಲ್ಲಿ ಉತ್ಪನ್ನಗಳ ವಿಲೇವಾರಿಯಿಂದ ಉಂಟಾಗಬಹುದಾದ ತಾಂತ್ರಿಕ ಮಾಹಿತಿ ಸೋರಿಕೆ ತಡೆಗಟ್ಟುವಿಕೆಯನ್ನು ಕೈಗೊಳ್ಳುತ್ತೇವೆ.

3. ನಾವು ಹಂಚಿಕೆದಾರರು ಮತ್ತು ವ್ಯವಹಾರ ಏಜೆಂಟರಂತಹ ನಮ್ಮ ಗುತ್ತಿಗೆದಾರ ವ್ಯವಹಾರ ಸಂಸ್ಥೆಗಳು ಸಾರ್ವಜನಿಕ ಅಧಿಕಾರಿಗಳಿಗೆ ಲಂಚ ನೀಡಿಕೆ ಇತ್ಯಾದಿ ಕಾರ್ಯಗಳಲ್ಲಿ ತೊಡಗದಂತೆ ಕಟ್ಟುನಿಟ್ಟಾದ ನಿರೀಕ್ಷೆಯನ್ನು ಹೊಂದಿರುತ್ತೇವೆ.

4. ನಾವು ನಮ್ಮ ಹಂಚಿಕೆದಾರರಿಂದ (ವಿಶೇಷವಾಗಿ ಅವರು ಗುಣಮಟ್ಟ ವಿಶ್ವಾಸ ಮತ್ತು ಮಾರಾಟಾನಂತರ ಸೇವೆಯ ವಿವರಣೆಗಳು) ಮಾರಾಟ ಸಾಮಗ್ರಿಗಳನ್ನು ಕಾನೂನುಬದ್ಧವಾಗಿ ಮತ್ತು ಸೂಕ್ತವಾಗಿ ಸಂರಕ್ಷಿಸಲು ಸಾಧ್ಯವಾಗುವಂತೆ ಅವರಿಗೆ ಮಾರ್ಗದರ್ಶನ ನೀಡುತ್ತೇವೆ.

# 14. ಶ್ರೇಯಾಸಕ್ತರು ಮತ್ತು ಆಸಕ್ತ ಪಕ್ಷಗಳೊಂದಿಗೆ ಬಾಂಧವ್ಯ



## ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ಸಮುದಾಯಗಳಿಗೆ ತನ್ನ ಕಾರ್ಯಾಚರಣೆ ಮತ್ತು ಕೊಡುಗೆಯನ್ನು ಪೂರ್ವಭಾವಿಯಾಗಿ ನೀಡುತ್ತದೆ ಮತ್ತು ಸೂಕ್ತವಲ್ಲದ ವ್ಯವಹಾರ ಮನರಂಜನೆ, ಉಡುಗೊರೆಗಳು, ದಾನಗಳು ಅಥವಾ ನೆರವುಗಳನ್ನು ನೀಡುವುದು ಮತ್ತು ಸ್ವೀಕರಿಸುವುದರಿಂದ ದೂರವಿರುತ್ತದೆ. Yaskawa Group ಲಂಚ ನೀಡುವುದಿಲ್ಲ ಅಥವಾ ಲಂಚ ನೀಡುವುದರ ಪ್ರಯತ್ನವೆಂದು ಶಂಕಿಸಬಹುದಾದ ರೀತಿಯಲ್ಲಿ ವರ್ತಿಸುವುದಿಲ್ಲ.

## ನಮ್ಮ ಬದ್ಧತೆಗಳು

1. ನಾವು ಜಪಾನ್ ಮತ್ತು ವಿದೇಶಗಳಲ್ಲಿ ಸಾರ್ವಜನಿಕ ಅಧಿಕಾರಿಗಳೊಂದಿಗೆ ಸಂಪೂರ್ಣ ಪಾರದರ್ಶಕ ಮತ್ತು ಸಮಾನಾಂತರ ಭಾಂಧವ್ಯ ಹೊಂದಿರುತ್ತೇವೆ ಮತ್ತು ಅವರಿಗೆ ಎಂದೂ ಲಂಚವೆಂದು ಅಥವಾ ತಪ್ಪು ಉದ್ದೇಶ ಹೊಂದಿರಬಹುದೆಂದು ಶಂಕಿಸಬಹುದಾದ ವ್ಯವಹಾರ ಮನರಂಜನೆ, ಉಡುಗೊರೆಗಳು ಅಥವಾ ನೆರವುಗಳನ್ನು ನೀಡುವುದಿಲ್ಲ ಅಥವಾ ಅವರ ವೆಚ್ಚಗಳನ್ನು ಭರಿಸುವುದಿಲ್ಲ.

2. ನಾವು ಸಾರ್ವಜನಿಕ ಅಥವಾ ಖಾಸಗಿ ಕ್ಷೇತ್ರದ ಗ್ರಾಹಕರಿಗೆ ವ್ಯವಹಾರ ಮನರಂಜನೆ, ಉಡುಗೊರೆಗಳು, ಹಣ ಅಥವಾ ಇತರ ನೆರವುಗಳನ್ನು ಕಾನೂನಾತ್ಮಕವಾಗಿ ಅನುಮತಿಸಲಾಗುವ ಷರತ್ತುಗಳು ಮತ್ತು ಸಾಂಪ್ರದಾಯಿಕ ರೀತಿಗಳನ್ನು ಮೀರಿ ನೀಡುವುದಿಲ್ಲ.

3. ನಾವು ಸರಬರಾಜುದಾರರಿಂದ ವ್ಯವಹಾರ ಮನರಂಜನೆ, ಹಣ ಅಥವಾ ಸರಕುಗಳನ್ನು ಕಾನೂನಾತ್ಮಕವಾಗಿ ಅನುಮತಿಸಲಾಗುವ ಷರತ್ತುಗಳು ಮತ್ತು ಸಾಂಪ್ರದಾಯಿಕ ರೀತಿಗಳನ್ನು ಮೀರಿ ಕೋರುವುದಿಲ್ಲ ಅಥವಾ ಸ್ವೀಕರಿಸುವುದಿಲ್ಲ.

4. ನಾವು ವ್ಯವಹಾರ ಚಟುವಟಿಕೆಗಳಲ್ಲಿ ಸಮುದಾಯಗಳೂ ಸೇರಿದಂತೆ ಸಮಾಜಕ್ಕೆ ಕೊಡುಗೆ ನೀಡುತ್ತೇವೆ. ನಾವು ಕೇವಲ ಪಾರದರ್ಶಕ ಅಂಗೀಕಾರ ಪ್ರಕ್ರಿಯೆಯಲ್ಲಿ ಮಾತ್ರ ದಾನಗಳು ಮತ್ತು ಪ್ರಾಯೋಜಕತ್ವದ ವಸ್ತುಗಳನ್ನು ಮಂಜೂರು ಮಾಡುತ್ತೇವೆ.

# III ನಮ್ಮ ಬದ್ಧತೆಗಳು

## 15. ಕಾರ್ಮಿಕ ಕಾನೂನುಗಳ ಪಾಲನೆ



### ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ದೇಶಗಳು, ಪ್ರಾಂತ್ಯಗಳು ಮತ್ತು ಸ್ಥಳೀಯ ಸರ್ಕಾರಗಳು ರೂಪಿಸಿರುವ ಕಾರ್ಮಿಕ ಕಾನೂನುಗಳು ಮತ್ತು ನಿಯಂತ್ರಣಗಳನ್ನು ಪಾಲಿಸುತ್ತದೆ.

## ನಮ್ಮ ಬದ್ಧತೆಗಳು

1. ನಾವು ಮಾನವ ಹಕ್ಕುಗಳೂ ಸೇರಿದಂತೆ ಉದ್ಯೋಗಿಗಳೊಂದಿಗಿನ ಒಪ್ಪಂದಗಳು ಮತ್ತು ಅನ್ವಯವಾಗುವ ಕಾರ್ಮಿಕ ಕಾನೂನುಗಳು ಮತ್ತು ನಿಯಂತ್ರಣಗಳನ್ನು ಹಾಗೂ ಅಂತರರಾಷ್ಟ್ರೀಯ ಮಾನದಂಡಗಳನ್ನು ಅರ್ಥಮಾಡಿಕೊಂಡಿದ್ದೇವೆ ಮತ್ತು ಪಾಲಿಸುತ್ತೇವೆ. ನಾವು ಒತ್ತಾಯಪೂರ್ವಕವಾಗಿ ಕಾರ್ಮಿಕರು ಅಥವಾ ಬಾಲ ಕಾರ್ಮಿಕರನ್ನು ಬಳಸುವುದಿಲ್ಲ. ನಾವು ನಮ್ಮ ಗುತ್ತಿಗೆಯ ವ್ಯವಹಾರ ಸಂಸ್ಥೆಗಳೂ ಸಹ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತಿಲ್ಲ ಎಂದು ಖಚಿತಪಡಿಸಿಕೊಳ್ಳಲು ಕೆಲಸ ಮಾಡುತ್ತೇವೆ.

2. ನಾವು ಸುರಕ್ಷಿತ ಕಾರ್ಯಸ್ಥಳ ಮತ್ತು ಆರೋಗ್ಯಕರ ಕಾರ್ಯ ಪರಿಸರವನ್ನು ಖಚಿತಪಡಿಸುತ್ತೇವೆ. ನಾವು ಕಾರ್ಯಸ್ಥಳದ ಸುರಕ್ಷತೆಗೆ ಸಂಬಂಧಿಸಿದ ಅನ್ವಯವಾಗುವ ಕಾನೂನುಗಳು ಮತ್ತು ನಿಯಂತ್ರಣಗಳು, ಮಾನದಂಡಗಳು ಮತ್ತು ನಮ್ಮ ಕಂಪನಿಯ ನಿಯಮಗಳನ್ನು ಪಾಲಿಸುತ್ತೇವೆ.

# 16. ತೃಪ್ತಿಕರ ಕಾರ್ಯಸ್ಥಳ ಪರಿಸರ



## ಗ್ರೂಪ್ ಕಾರ್ಪೋರೇಟ್ ನೀತಿ ಸಂಹಿತೆ

Yaskawa Group ವ್ಯಕ್ತಿಗತ ಮಾನವ ಹಕ್ಕುಗಳು ಮತ್ತು ಮೌಲ್ಯಗಳ ವೈವಿಧ್ಯತೆಯನ್ನು ಗೌರವಿಸುತ್ತದೆ ಮತ್ತು ನಮ್ಮ ವಿಶ್ವಾದ್ಯಂತ ಇರುವ "Yaskawa ಎಚ್ ಆರ್ ಮೌಲ್ಯಗಳು" ಅನುಸಾರ ಚಟುವಟಿಕೆಗಳನ್ನು ಕೈಗೊಳ್ಳುತ್ತದೆ.

### Yaskawa ಎಚ್ ಆರ್ ಮೌಲ್ಯಗಳು

● Yaskawaದ ಭಾಗವಾಗಿ ಇರುವುದು

ಸಾಮಾನ್ಯ ಗುರಿಗಳನ್ನು ಸಾಧಿಸಲು, ಅದೇ ಸಮಯಕ್ಕೆ ನಿರಂತರವಾಗಿ ಹೊಸ ಸವಾಲುಗಳನ್ನು ಬರಮಾಡಿಕೊಳ್ಳಲು ನೀವು ಉಪಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಇತರರೊಂದಿಗೆ ಸಹಕರಿಸಬೇಕು ಎಂದು ನಾವು ನಿರೀಕ್ಷಿಸುತ್ತೇವೆ.

● Yaskawa ಜೊತೆಗೆ ಬೆಳವಣಿಗೆ

ಸಂವಹ ನ ಕಲಿಸುವ -ಮತ್ತು- ಕಲಿಯುವ  ವಾತಾವರಣದಲ್ಲಿ ನಮ್ಮ ಜಾಗತಿಕ ವ್ಯವಹಾರಕ್ಕೆ ಕೊಡುಗೆ ನೀಡುವ ಬಗ್ಗೆ ಉತ್ಸಾಹ ಹೊಂದಿರುವ ವ್ಯಕ್ತಿಗಳನ್ನು ಬೆಳೆಸುವ ಮತ್ತು ಅವರನ್ನು ಸವಾಲುಪೂರ್ಣ ವೃತ್ತಿ ಅವಕಾಶಗಳಿಗೆ ಹೊಂದಿಸುವ ಪ್ರತಿಜ್ಞೆ ಮಾಡುತ್ತೇವೆ.

● Yaskawaದಲ್ಲಿ ಕೆಲಸ ಮಾಡುವಿಕೆ

ನಾವು ನಿಮ್ಮ ವ್ಯಕ್ತಿತ್ವ ಮತ್ತು ವೈವಿಧ್ಯತೆಯನ್ನು ಗೌರವಿಸುತ್ತೇವೆ, ಮತ್ತು ಪ್ರೇರೇಪಣೆ ಒದಗಿಸುವ ಸುರಕ್ಷಿತ ಮತ್ತು ಆರೋಗ್ಯಪೂರ್ಣ ಕೆಲಸ ಮಾಡುವ ವಾತಾವರಣವನ್ನು ಒದಗಿಸುವ ಪ್ರತಿಜ್ಞೆ ಮಾಡುತ್ತೇವೆ.

● Yaskawaದಿಂದ ಮಾನ್ಯತೆ

ನಾವು ಸಕ್ರಿಯ ಸಂವಹನೆಯ ಮೂಲಕ ನ್ಯಾಯೋಚಿತ ಮೌಲ್ಯಾಂಕನ ಮತ್ತು ಕಾರ್ಯಸಾಧನೆಯ ಮಾಹಿತಿಯ ಭರವಸೆ ನೀಡುತ್ತೇವೆ.

## ನಮ್ಮ ಬದ್ಧತೆಗಳು

1. ನಾವು ಲೈಂಗಿಕ ಕಿರುಕುಳ, ಅಧಿಕಾರದ ಕಿರುಕುಳ ಅಥವಾ ನೈತಿಕ ಕಿರುಕುಳದಂತಹವುಗಳಿಂದ ಇತರರಿಗೆ ಮುಜುಗರ ಉಂಟುಮಾಡುವ ಅಥವಾ ಅವರ ನಡತೆಯ ಮೇಲೆ ಕಳಂಕ ಉಂಟು ಮಾಡುವ ರೀತಿಯಲ್ಲಿ ನಡೆದುಕೊಳ್ಳುವುದಿಲ್ಲ.

2. ನಾವು ವ್ಯಕ್ತಿಯ ಮೂಲ ಮಾನವ ಹಕ್ಕುಗಳು, ವೈವಿಧ್ಯತೆ ಮತ್ತು ವ್ಯಕ್ತಿತ್ವವನ್ನು ಗೌರವಿಸುತ್ತೇವೆ. ಮೇಲಾಗಿ, ನಾವು ಉದ್ಯೋಗ, ಸಿಬ್ಬಂದಿ ಮೌಲ್ಯಾಂಕನಗಳು, ಬಡ್ತಿಗಳು, ಜವಾಬ್ದಾರಿ ನೀಡುವಿಕೆಗಳು ಇತ್ಯಾದಿಗಳಲ್ಲಿ ರಾಷ್ಟ್ರೀಯತೆ ಅಥವಾ ಜನಾಂಗೀಯತೆ, ವರ್ಣ, ಧರ್ಮ, ಲಿಂಗ, ವಿಚಾರಗಳು, ವಯಸ್ಸು, ಅಸಮರ್ಥತೆ, ಲೈಂಗಿಕ ಒಲವು ಅಥವಾ ಇತರ ಯಾವುದೇ ಗುಣಲಕ್ಷಣಗಳ ಆಧಾರದ ಮೇಲೆ ತಾರತಮ್ಯ ಅಥವಾ ಸಹಿಷ್ಣುತೆಯನ್ನು ತೋರುವುದಿಲ್ಲ.

3. ನಾವು ಉದ್ಯೋಗಿಗಳ ಗೌಪ್ಯತೆಯನ್ನು ರಕ್ಷಿಸುತ್ತೇವೆ ಮತ್ತು ಕೇವಲ ಕಾನೂನಾತ್ಮಕವಾಗಿ ಅನುಮತಿಸಲಾಗುವ ಷರತ್ತುಗಳ ಅಂತರ್ಗತ ಮಾತ್ರ ವೈಯಕ್ತಿಕ ದತ್ತಾಂಶವನ್ನು ತೆಗೆದುಕೊಳ್ಳುತ್ತೇವೆ, ಸಂಗ್ರಹಿಸುತ್ತೇವೆ, ಸಂಸ್ಕರಿಸುತ್ತೇವೆ, ಬಳಸುತ್ತೇವೆ ಮತ್ತು ಸ್ಟೋರ್ ಮಾಡುತ್ತೇವೆ. ನಾವು ಕಾರ್ಯಾಚರಣೆಗಳ ಸಮಯದಲ್ಲಿ ಪಡೆದುಕೊಂಡಿರುವ ಉದ್ಯೋಗಿಗಳ ವೈಯಕ್ತಿಕ ಮಾಹಿತಿಯನ್ನು ನಿಕಟವಾಗಿ ನಿಯಂತ್ರಿಸುತ್ತೇವೆ ಮತ್ತು ಎಂದಿಗೂ ಸೂಕ್ತ ಕಾರಣವಿಲ್ಲದೆ ಅವುಗಳನ್ನು ಬಹಿರಂಗಪಡಿಸುವುದಿಲ್ಲ ಅಥವಾ ಬಿಟ್ಟುಕೊಡುವುದಿಲ್ಲ.

# IV ಮಾತನಾಡಿ (or ಸ್ಪೀಕ್ ಅಪ್)

## 1. ಸಹಾಯ ಮತ್ತು ಸಲಹೆ ಪಡೆಯುವಿಕೆ

1. ಒಂದು ವೇಳೆ ಪಾಲನೆ ಮತ್ತು ಪ್ರಾಮಾಣಿಕತೆ ಕುರಿತು ಯಾವುದೇ ಸಮಸ್ಯೆ ಎದುರಾದರೆ* , ತಕ್ಷಣವೇ ನಿಮ್ಮ ಲೈನ್ ವ್ಯವಸ್ಥಾಪಕರ ಬಳಿ ಅದನ್ನು ಪ್ರಸ್ತಾಪಿಸಿ.

2. ಒಂದು ವೇಳೆ ನೀವು ನಿಮ್ಮ ಲೈನ್ ವ್ಯವಸ್ಥಾಪಕರ ಬಳಿ ಪಾಲನೆ ಮತ್ತು ಪ್ರಾಮಾಣಿಕತೆ ಕಳಕಳಿಯ ಬಗ್ಗೆ ಚರ್ಚಿಸಲು ಮುಜುಗರ ಹೊಂದಿದ್ದರೆ, ದಯವಿಟ್ಟು ನಮ್ಮ ಸ್ಥಳೀಯ/ಪ್ರಾಂತೀಯ ಪಾಲನಾ ಅಧಿಕಾರಿ/ಮುಖಂಡರು, ಅಥವಾ ಲಭ್ಯವಿರುವ ಕಾರ್ಯವಿಭಾಗ ಅಥವಾ Speak Up ಚಾನೆಲ್ಲುಗಳನ್ನು ಸಂಪರ್ಕಿಸಿ.

## 2. Speak Up ಚಾನೆಲ್ಲುಗಳು

1. ಪಾಲನೆ ಮತ್ತು ಪ್ರಾಮಾಣಿಕತೆಯ ಉಲ್ಲಂಘನೆ ಅಥವಾ ಉಲ್ಲಂಘಿಸಿರುವಂತೆ ಕಂಡುಬರುವ ಸಂದರ್ಭ ಅಥವಾ ಯಾರೊಬ್ಬರ ನಡವಳಿಕೆಯು ನಿಮ್ಮ ಅರಿವಿಗೆ ಬಂದರೆ, ಆದರೆ ನೀವು ಅದನ್ನು ನಿಮ್ಮ ಲೈನ್ ವ್ಯವಸ್ಥಾಪಕರೊಂದಿಗೆ ಚರ್ಚಿಸಲು ಮುಜುಗರ ಹೊಂದಿದ್ದರೆ, ಪ್ರತಿಯೊಂದೂ ಕಂಪನಿಯಲ್ಲಿ ಸ್ಥಾಪಿಸಲಾಗಿರುವ ಯಾವುದೇ Speak Up ಚಾನೆಲ್ಲುಗಳು (ಅಂದರೆ ಪಾಲನಾ ಅಧಿಕಾರಿ/ಮುಖಂಡರು, ಕಾನೂನು ಮತ್ತು ಪಾಲನೆ, ಸಹಾಯವಾಣಿ, ಇತ್ಯಾದಿ) ಲಭ್ಯವಿವೆ.

2. Yaskawa Groupನ ಎಲ್ಲಾ ಉದ್ಯೋಗಿಗಳು ಯಾವಾಗಲೂ YASKAWA Electric Corporation ಸಹಾಯವಾಣಿಯನ್ನು (ಜಪಾನ್ ಕೇಂದ್ರ ಕಛೇರಿ) ಈ-ಮೇಲ್ ಮುಖಾಂತರ ನಿಮ್ಮ ಹೆಸರಿನಲ್ಲಿ ಅಥವಾ ಅನಾಮಧೇಯವಾಗಿ ಸಂಪರ್ಕಿಸುವ ಆಯ್ಕೆ ಹೊಂದಿರುವಿರಿ.

   YASKAWA Electric Corporation (ಜಪಾನ್) ಪಾಲನಾ ಸಹಾಯವಾಣಿ: hotline@yaskawa.co.jp (ಜಪಾನಿ/ಇಂಗ್ಲೀಷ್)

3. ಒಂದು ವೇಳೆ ಕಂಪನಿಯು ಪಾಲನೆ ಮತ್ತು ಪ್ರಾಮಾಣಿಕತೆ ವಿರುದ್ಧವಾಗಿ ಯಾವುದೇ ಸಂದರ್ಭ ಅಥವಾ ನಡವಳಿಕೆಯ ಯಾವುದೇ ಸಂದೇಹವನ್ನು ಕಂಡಲ್ಲಿ, ಕಂಪನಿಯು ಸತ್ಯ-ಶೋಧನಾ ತನಿಖೆಯನ್ನು ಜರುಗಿಸುವುದು. ಅಂತಹ ಪ್ರಕರಣಗಳಲ್ಲಿ, ಎಲ್ಲಾ ಉದ್ಯೋಗಿಗಳು ತನಿಖೆಗೆ ತಮ್ಮ ಗರಿಷ್ಠ ಸಹಕಾರವನ್ನು ನೀಡಬೇಕು.

4. Yaskawa Group ವ್ಹಿಜ್ಲ್ ಬ್ಲೋಯರ್ಸ್ ಗೌಪ್ಯತೆಯನ್ನು ಮತ್ತು ವರದಿಗಳ ಸತ್ಯ ಮತ್ತು ವಿವರಗಳನ್ನು ಗೌಪ್ಯವಾಗಿ ಇರಿಸುವುದನ್ನು ಮತ್ತು ಸಂಬಂಧಿತ ತನಿಖೆಗಳಲ್ಲಿ ತೊಡಗಿರುವ ಯಾವುದೇ ವ್ಯಕ್ತಿಗೆ ಬಹಿರಂಗಪಡಿಸದೆ ಇರುವುದನ್ನು ಖಚಿತಪಡಿಸುತ್ತದೆ. ಒಳ್ಳೆಯ ಉದ್ದೇಶದಿಂದ ಕಳಕಳಿಯೊಂದನ್ನು ಎತ್ತುವ ಯಾವುದೇ ಉದ್ಯೋಗಿಯ ವಿರುದ್ಧ ಸೇಡಿನ ಕ್ರಮವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

* ಉಲ್ಲೇಖಿಸಿ"3. "ಪಾಲನೆ ಮತ್ತು ಪ್ರಾಮಾಣಿಕತೆ"" ಎಂದರೇನು(p.4).

# V ಪ್ರಾಮಾಣಿಕತೆ ಪರೀಕ್ಷೆ

"ನಮ್ಮ ಬದ್ಧತೆಗಳು" ಮತ್ತು ಆಂತರಿಕ ನಿಯಮಗಳು ಅನುಸರಿಸಬೇಕಾದ ಎಲ್ಲಾ ಪಾಲನಾ ಮತ್ತು ಪ್ರಾಮಾಣಿಕ ವಿಷಯಗಳನ್ನು ಸುಸ್ಪಷ್ಟವಾಗಿ ಒಳಗೊಂಡಿರುವುದಿಲ್ಲ. ಆದ್ದರಿಂದ, "ನಮ್ಮ ಬದ್ಧತೆಗಳು" ಮತ್ತು ಆಂತರಿಕ ನಿಯಮಗಳಲ್ಲಿ ಹೇಳಿರುವ ಸ್ಥಿತಿಯ ಕುರಿತು ನಾವು ಖಚಿತವಾಗಿ ಇಲ್ಲದಿದ್ದರೆ, ಪ್ರಾಮಾಣಿಕತೆಯೊಂದಿಗೆ ಸೂಕ್ತವಾದ ನಡವಳಿಕೆಯನ್ನು ನಾವು ಖಚಿತಪಡಿಸಿಕೊಳ್ಳಲು ನಮಗೆ ನಾವು ಕೆಳಗಿನ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು.

- ☑ ನನ್ನ ನಡವಳಿಕೆಯು ಕಾನೂನುಬದ್ಧ ಆಗಿದೆಯೆ ಮತ್ತು ವಿಧೇಯತೆಯಿಂದ ಕೂಡಿದೆಯೆ?
- ☑ ಅದು "Yaskawa Group ನೀತಿ ಸಂಹಿತೆ"ಯ ಉದ್ದೇಶದ ಅನುಸಾರ ಇದೆಯೆ?
- ☑ ಅದು ಸಾರ್ವಜನಿಕ ಆದರೆ Yaskawa Group ಅಥವಾ ನನಗೆ ನಕಾರಾತ್ಮಕ ಪರಿಣಾಮಗಳನ್ನು ತಂದೊಡ್ಡಬಹುದೆ?
- ☑ ನಾನು ಅದನ್ನು ಸಾಮಾನ್ಯ ಸಾರ್ವಜನಿಕರು, ಸರ್ಕಾರೀ ಅಧಿಕಾರಿಗಳು, ಗ್ರಾಹಕರು ಮತ್ತು ವ್ಯವಹಾರ ಸಹವರ್ತಿಗಳಿಗೆ ವಿವರಿಸಬಹುದೆ?
- ☑ ನಾನು ಅದನ್ನು ನನ್ನ ಪರಿವಾರ ಮತ್ತು ಸ್ನೇಹಿತರಿಗೆ ವಿಶ್ವಾಸದಿಂದ ವಿವರಿಸಬಹುದೆ?



YASKAWA

**YASKAWA INDIA PRIVATE LIMITED**

**subsidiary of**

**YASKAWA ELECTRIC CORPORTATION**

1ನೇ ಆವೃತ್ತಿ, ಮಾರ್ಚ್ 2016 LC03-01-16KA
2ನೇ ಆವೃತ್ತಿ, ಸೆಪ್ಟೆಂಬರ್ 2016 LC03-01-17KA
3ನೇ ಆವೃತ್ತಿ, ಫೆಬ್ರುವರಿ 2024 LC2402-007KA